ಅಚಲ

ಸಂಪುಟ 12 ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ ಮೇ 1997
ಸಂಚಿಕೆ 2 ದ್ವೈಮಾಸಿಕ ಬೆಂಗಳೂರು

ಚಂದಾ ಮತ್ತು ಲೇಖನಗಳನ್ನು
ಕಳುಹಿಸುವ ವಿಳಾಸ

ಸಂಪಾದಕರು
ಅಚಲ
ಬಿ-30, ರಿಸರ್ವ್ ಬ್ಯಾಂಕ್ ಸ್ಟಾಫ್ ಕ್ವಾರ್ಟರ್ಸ್
1ನೇ ಮುಖ್ಯರಸ್ತೆ, 9ನೇ ಕ್ರಾಸ್
ವಿಜಯನಗರ ಎರಡನೇ ಹಂತ,
ಬೆಂಗಳೂರು - 40

ಬೆಲೆ

ಬಿಡಿ ಪ್ರತಿ - 4 ರೂ.
ವಾರ್ಷಿಕ ಚಂದಾ - 25 ರೂ.
ಅಜೀವ ಚಂದಾ - 200 ರೂ.
(ಸಂಸ್ಥೆಗಳಿಗೆ) - 250 ರೂ.

ಒಳಪುಟಗಳಲ್ಲಿ

ಸಂಪಾದಕ ಮಂಡಲಿ
ಎಸ್. ಗಾಯತ್ರಿ
ನೇಮಿಚಂದ್ರ, ದೇವಿ
ಡಾ|| ಬಿ.ಎನ್. ಸುಮಿತ್ರಾಬಾಯಿ
ಶಾಂತಾ ನಾಗರಾಜ್

ಪ್ರಕಾಶಕರು
ಜಾಗೃತಿ ಮಹಿಳಾ
ಅಧ್ಯಯನ ಕೇಂದ್ರ
ಬೆಂಗಳೂರು

ಅಭಿನಂದನೆ

ಕರ್ನಾಟಕ ಲೇಖಕಿಯರ ಸಂಘವು ನೀಡುವ 1997ರ ಸಾಲಿನ "ಅನುಪಮಾ ಪ್ರಶಸ್ತಿ" ಪಡೆದಿರುವ ಹಿರಿಯ ಕವಯಿತ್ರಿ ಶ್ರೀಮತಿ ಶೈಲಜಾ ಉಡುಚಣ ಅವರನ್ನು 1996ರ ಸಾಲಿನ ಸಾವಿತ್ರಮ್ಮ ದತ್ತಿನಿಧಿ ಬಹುಮಾನ ವಿಜೇತೆ ಕವಯತ್ರಿ ಕೆ.ಎಸ್. ವಿಜಯಲಕ್ಷ್ಮಿ ಅವರನ್ನು ಮತ್ತು 1996 ಸಾಲಿನ ಗೀತಾದೇಸಾಯಿ ದತ್ತಿನಿಧಿ ಬಹುಮಾನ ಗಳಿಸಿದ ಕಾದಂಬರಿಗಾರ್ತಿ ಶ್ರೀಮತಿ ರೇಖಾ ಕಾಖಂಡಕಿ ಅವರನ್ನೂ 'ಅಚಲ' ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

★ ಭಾರತದ ಖ್ಯಾತ ಉರ್ದು ಸಾಹಿತಿ ಶ್ರೀಮತಿ ಖುರ‍್ರತುಲೇನ್ ಹೈದರ್ ಉರ್ದು ಸಾಹಿತ್ಯ ಪ್ರಪಂಚದ 1996ರ ಅತ್ಯುನ್ನತ ಸಾಹಿತ್ಯ ಪ್ರಶಸ್ತಿಗಳಿಸಿದ್ದಾರೆ. ಈ ಪ್ರಶಸ್ತಿಯನ್ನು ಖತಾರ್‌ನ ದೋಹಾದಲ್ಲಿರುವ ಮಜ್‌ಲಿಸ್-ಎ-ಫರೋಗ್ ಎ-ಉರ್ದು ಅದಬ್ ಎಂಬ ಸಾಹಿತ್ಯ ಸಂಘ ಪ್ರತೀ ವರ್ಷ ಏಷ್ಯಾ ಖಂಡದ ಇಬ್ಬರು ಸಾಹಿತಿಗಳಿಗೆ ಪ್ರದಾನ ಮಾಡುತ್ತದೆ. ಈ ಪ್ರಶಸ್ತಿಯ ಮೌಲ್ಯ ರೂ. ಎರಡು ಲಕ್ಷ ಮತ್ತು ಚಿನ್ನದ ಪದಕ.

★ ಸಂಸ್ಕೃತಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸಾಧನೆ ಮಾಡಿದವರಿಗೆ ಅಸ್ಸಾಂ ಸರ್ಕಾರ ಕಮಲಕುಮಾರಿ ರಾಷ್ಟ್ರ ಪ್ರಶಸ್ತಿಯನ್ನು ನೀಡುತ್ತದೆ. ಇತ್ತೀಚೆಗೆ ಘೋಷಿಸಲಾದ 1995ನೇ ಸಾಲಿನ ಪ್ರಶಸ್ತಿಯನ್ನು ದೆಹಲಿ ವಿಶ್ವವಿದ್ಯಾನಿಲಯದ ಶ್ರೀಮತಿ ಇಂದಿರಾ ಗೋಸ್ವಾಮಿ ಗಳಿಸಿದ್ದಾರೆ.

★ ಅತ್ಯುತ್ತಮವಾಗಿ ಕಾಪಾಡಿಕೊಂಡು ಬಂದಂಥಹ ಕಟ್ಟಡ ಹಾಗೂ ಉದ್ಯಾನವನಗಳಿಗೆ ಬೆಂಗಳೂರಿನ ಅರ್ಬನ್ ಆರ್ಟ್ ಕಮೀಷನ್ ಪ್ರತೀ ವರ್ಷ ಪ್ರಶಸ್ತಿ ನೀಡುತ್ತದೆ. ಈ ಪ್ರಶಸ್ತಿ ಈ ಬಾರಿಯೂ ಶ್ರೀಮತಿ ಪ್ರಿಯಾ ಮ್ಯಾಸ್ಕರ‍್ಹಾನ್ಸ್‌ರವರಿಗೇ ಲಭಿಸಿದೆ. ಇದು ಸತತವಾಗಿ ಏಳನೇ ಬಾರಿ ಇವರಿಗೆ ಸಂದಿದೆ.

★ 'ಡ್ರೈ ಡೇಸ್ ಇನ್ ಡಬ್ಬಾಸ್‌ಗುಂಟ' ಇದು ನೂಪುರ್ ಬಸು ಟಿವಿಗಾಗಿ ತಯಾರಿಸಿದ ಸಾಕ್ಷ್ಯಚಿತ್ರ. ಇದಕ್ಕಾಗಿ ಆಕೆ ರೇಡಿಯೋ ಮತ್ತು ಟೆಲಿವಿಷನ್ ಮಹಿಳೆಯರ ಅಂತರಾಷ್ಟ್ರೀಯ ಸಂಘದ ಪ್ರಶಸ್ತಿಗಳಿಸಿದ್ದಾರೆ. ಆಂಧ್ರಪ್ರದೇಶದಲ್ಲಿ ಯಶಸ್ವಿಯಾದ ಮಹಿಳೆಯರ ಪಾನನಿರೋಧ ಚಳುವಳಿಯನ್ನು ಇದರಲ್ಲಿ ಅತ್ಯುತ್ತಮವಾಗಿ ಚಿತ್ರೀಕರಿಸಲಾಗಿದೆಯಂತೆ.

ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳುಹಿಸಬೇಕು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10/= ಬ್ಯಾಂಕ್ ಕಮಿಷನ್ ಸೇರಿಸಿ ಕಳುಹಿಸಬೇಕು

ಎಂ.ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸ ಬೇಕು

ಬದಲಾದ ವಿಳಾಸಗಳನ್ನು ದಯವಿಟ್ಟು ಬರೆದು ತಿಳಿಸಿ.

ಎತ್ತ ಸಾಗಿದೆ ನಮ್ಮ ಸ್ವಾತಂತ್ರ್ಯ :

ಬರುವ ಆಗಸ್ಟ್ ತಿಂಗಳಿಗೆ ಭಾರತದ ಸ್ವಾತಂತ್ರ್ಯಕ್ಕೆ ಐವತ್ತು ತುಂಬುವುದು. ಈ ಅರ್ಧಶತಕದ ಗಳಿಗೆಯನ್ನು ವೈಭವ ಆಡಂಬರಗಳೊಡನೆ ಆಚರಿಸಲು ಕೇಂದ್ರದ ಇಲಾಖೆಗಳೆಲ್ಲ ಸಜ್ಜಾಗುವಂತೆ ಸರ್ಕಾರವು ಬಯಸುತ್ತಿದೆ. ಅದಕ್ಕಾಗಿ ನೇಮಿಸಿರುವ ವಿಶೇಷ ಸಮಿತಿ ಜನಸಾಮಾನ್ಯರೆಲ್ಲರಿಂದ ಸಲಹೆಗಳನ್ನು ಆಹ್ವಾನಿಸಿದೆ. ದೂರದರ್ಶನದ ಸರ್ಕಾರಿ ಛಾನೆಲ್ ಕಳೆದ ವರ್ಷದಿಂದಲೇ ''ಸ್ವಾತಂತ್ರ್ಯ ಹೋರಾಟದ ಇತಿಹಾಸ''ದ ಹೆಸರು ಹೊತ್ತ ಅಬ್ಬರ, ಕಿರುಚಾಟ, ಸಂಘರ್ಷಣೆ, ಹಿಂಸಾಚಾರ, ಹೊಡೆದಾಟ, ಬಡಿದಾಟ ತುಂಬಿರುವ ಧಾರಾವಾಹಿಗಳನ್ನು ಪುಂಖಾನುಪುಂಖವಾಗಿ ಪ್ರಸಾರ ಮಾಡತೊಡಗಿದೆ. ದೇಶದ ರಾಜಕಾರಣವು ಅಧಿಕಾರ ಸೂತ್ರಕ್ಕೆ ಕಟ್ಟಿರುವ ಗಾಳಿ ಪಟವಾಗಿದೆ. ಪತ್ರಿಕೆಗಳಲ್ಲಿ ರಾಜಕೀಯ ನಾಯಕರ ಭ್ರಷ್ಟತೆ ಮುಖವಾಡ ಕಳಚಿಟ್ಟು ಸುದ್ದಿ ಸ್ವಾರಸ್ಯವಾಗಿ ವೈಭವೀಕೃತವಾಗುತ್ತಿದೆ. ಅಧಿಕಾರದಾಹ, ಭ್ರಷ್ಟತನದಲ್ಲಿ ಪೈಪೋಟಿಯಲ್ಲಿ ಸರ್ಕಾರಗಳು ಮುಳುಗೇಳುತ್ತಿದ್ದು ಜನಸಾಮಾನ್ಯರಿಗೆ ಯಾವ ಪದಾರ್ಥಗಳೂ ಕೈಗೆಟುಕದಂತೆ ಬೆಲೆಗಳು ಆಕಾಶವನ್ನೂ ದಾಟಿ ಮೇಲೇರುತ್ತಿವೆ.

ಪರಿಸ್ಥಿತಿ ಹೀಗಿರುವಾಗ ದೇಶವು ತನ್ನ ''ಸ್ವ-ತಂತ್ರ''ದ ನಡುಹರೆಯದ ಹೊಸ್ತಿಲಲ್ಲಿ ನಿಂತು, ಆತ್ಮಾವಲೋಕನ ಮಾಡಿಕೊಳ್ಳುವಂಥ ಪ್ರಬುದ್ಧತೆಯ ಯಾವ ಲಕ್ಷಣಗಳೂ ಕಾಣುತ್ತಿಲ್ಲ. ಇದೇದೇಶದ ಸಂವಿಧಾನದ ಕರ್ತೃಗಳು ವ್ಯಕ್ತಿಸ್ವಾತಂತ್ರ್ಯ, ಧರ್ಮ ನಿರಪೇಕ್ಷತೆ, ಅಭಿವ್ಯಕ್ತಿ ಸ್ವಾತಂತ್ರ್ಯದಂಥ ಉದಾತ್ತ ತತ್ವಗಳು ನಮ್ಮ ದೇಶದ ಬಹು ಸಾಂಸ್ಕೃತಿಕ ಪರಿಸ್ಥಿತಿಯಲ್ಲಿ ಅತ್ಯವಶ್ಯಕವೆಂದು ಮನಗಂಡಿದ್ದರು. ಆದರೆ ಈಗ ಆಗುತ್ತಿರುವುದೇನು? ಬ್ರಿಟಿಷರ ವಸಾಹತು ಕೈಗಳಿಂದ ಅಧಿಕಾರ ಕಸಿದುಕೊಂಡದ್ದು, ತಾವು ಗದ್ದುಗೆ ಹಿಡಿದುಕೊಳ್ಳುವುದೇ ಸ್ವಯಂ-ತಂತ್ರ ಎಂಬ ಸ್ಥಿತಿ ಇಂದು ಸರ್ವವ್ಯಾಪಿಯಾಗಿ ಬೆಳೆದಿದೆ. ಧರ್ಮ ನಿರಪೇಕ್ಷತೆ ಎಂಬ ತತ್ವವು ತಿರುಚಿ ಹೋಗಿ ಧರ್ಮವು ರಾಜಕಾರಣದೊಳಗೆ ಸೇರಿ ಪೂರ್ಣವಾಗಿ ತನ್ನ ಕೈಚಳಕ ನಡೆಸತೊಡಗಿದೆ. ಸ್ವತಂತ್ರಭಾರತದಲ್ಲಿ ಇಂದು ವ್ಯಕ್ತಿಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯಗಳೆರಡನ್ನೂ ನಿರಂತರವಾಗಿ ಹರಣ ಮಾಡುವಲ್ಲಿ ಧರ್ಮ-ರಾಜಕಾರಣಗಳೆರಡೂ ಕೈ ಜೋಡಿಸಿವೆ.

ಧಾರ್ಮಿಕ ಶಕ್ತಿಗಳು ತಮ್ಮ ಸಂಕುಚಿತ ಸಂಪ್ರದಾಯಸ್ಥ ಭಾವನೆಗಳನ್ನು ತೀವ್ರವಾದ ಭಾವಾತಿರೇಕದಿಂದ ಅಪ್ಪಿಕೊಳ್ಳುತ್ತಾ ದೇಶದ ಜನತೆಯನ್ನು ಚಿಕ್ಕ ಚಿಕ್ಕ ಮತೀಯ ಗುಂಪುಗಳನ್ನಾಗಿ ಒಡೆಯುತ್ತಾ, ಅವು ಪರಸ್ಪರ ಅನುಮಾನ, ದ್ವೇಷ, ಪ್ರತೀಕಾರಗಳಿಂದ ವರ್ತಿಸುವಂತೆ ಪ್ರೇರಿಸತೊಡಗಿವೆ. ಭಾರತೀಯರ ಧರ್ಮಪರತೆ ಸಹಿಷ್ಣುತೆ - ಶಾಂತಿಗಳನ್ನು ಬೆನ್ನೆಲುಬಾಗಿ ಹೊಂದಿದೆ ಎಂಬ ನಂಬಿಕೆ ಈ ಐವತ್ತು ವರ್ಷಗಳಲ್ಲಿ ಸುಳ್ಳಾಗಿದೆ.

ಮತೀಯ, ಮೂಲಭೂತವಾದಿ ಧೋರಣೆಗಳು ಕಳೆದ ದಶಕದಿಂದ ತೀವ್ರವಾಗಿರುವುದಕ್ಕೆ ಕಾರಣಗಳು ದೇಶವು ತಳೆದಿರುವ ಆರ್ಥಿಕ ನೀತಿಯಲ್ಲೇ ಹುದುಗಿವೆ. ಉದಾರೀಕರಣ, ಜಾಗತೀಕರಣ ನೀತಿಯನ್ನು ಅಪ್ಪಿದ್ದರಿಂದ ಪರಕೀಯ ಶಕ್ತಿಗಳು ನಮ್ಮ ಆರ್ಥಿಕ ರಾಜನೈತಿಕ, ಸಾಮಾಜಿಕ ಬದುಕನ್ನು ಆಕ್ರಮಿಸಲು ಹೆಬ್ಬಾಗಿಲೇ ತೆರೆದಂತಾಗಿದೆ. ಈ ಸಾಂಸ್ಕೃತಿಕ ದಾಳಿಯಿಂದ, ದಿಢೀರನೆ ಹಳೆಯ ಮೌಲ್ಯಗಳೆಲ್ಲ ಒತ್ತರಿಸಲ್ಪಡುತ್ತಿವೆ. ರೂಢಿಗತವಾದ ನಂಬಿಕೆಗಳಿಗೆ ಅಂಟಿಕೊಂಡಿದ್ದ, ಪರಿಚಿತವಾಗಿದ್ದ ಜೀವನ ವಿಧಾನ, ಅದರಿಂದ ಹುಟ್ಟಿದ್ದ ಆತ್ಮ ವಿಶ್ವಾಸಗಳು ನುಚ್ಚು ನೂರಾಗುತ್ತಿವೆ. ಲಾಭಕೋರತನ ಮಾತ್ರವೇ ಪರಮ ಆದರ್ಶವಾಗಿಹೋದ ಈ ಸ್ಥಿತಿಯಲ್ಲಿ ಮಾನವೀಯತೆಯು ನಿರ್ನಾಮವಾಗುವ ಅಪಾಯವಿದೆ. ಚಾಣಾಕ್ಷರಾದವರು ಈ ''ಪ್ರಗತಿ''ಯ ಹೊಸ ನಾಡಿ ಹಿಡಿದು ವೇಗವಾಗಿ ಬೆಳೆಯಲು ಧಾವಿಸುತ್ತಿದ್ದರೆ, ಈ ಹೊಡೆತದಿಂದ ಸಾಂಸ್ಕೃತಿಕ ಆಘಾತಕ್ಕೆ ಒಳಗಾಗಿರುವ ಸಂಪ್ರದಾಯಸ್ಥ ಜನರು ಮಾನಸಿಕ ಹಿಂಜರಿತಕ್ಕೆ ಬಲಿಯಾಗಿದ್ದಾರೆ. ಇಂಥ ಹಿನ್ನಡೆಯ ಒಂದು ಲಕ್ಷಣವಾಗಿ ಈ ಜನರ ಸಂವೇದನೆಗಳು ''ಮುಟ್ಟಿದರೆ ಮುನಿ'' ಸಸ್ಯದ ಹಾಗೆ ಇತರರ ಬಗ್ಗೆ ಬೇಗ ಮುದುಡುವುದು, ತಮ್ಮೊಳಗೇ ಬಿಗಿದುಕೊಳ್ಳುವುದು ಇಂದು ಕಂಡುಬರುತ್ತದೆ.

ತಾವು ಎಲ್ಲಿ ಅಶಕ್ತರೆನಿಸಿ ಬದಿಗೆ ಒತ್ತರಿಸಲ್ಪಡುತ್ತೇವೋ ಎಂಬ ಅಂಜಿಕೆ, ಅದರಿಂದ ಪ್ರೇರಿತವಾದ ಆಕ್ರಮಣ ಶೀಲತೆ, ಈ ಭೀತಿಯೂ ಸ್ವಾರ್ಥವೂ ಸೇರಿದಾಗ ಹುಟ್ಟುವ ಅಧಿಕಾರದಾಹ ಇಂದು ಗುಟ್ಟಾಗಿಲ್ಲ. ಅಧಿಕಾರ ಸಾಧಿಸಲು ಪ್ರಜೆಗಳ 'ಮತಶಕ್ತಿ'ಯನ್ನು ದೇಶವು ನಂಬಿದ್ದೇ ಒಂದು ತಪ್ಪೆನ್ನುವಷ್ಟರ ಮಟ್ಟಿಗೆ 'ಮತಶಕ್ತಿ'ಯನ್ನು 'ಮತೀಯಶಕ್ತಿ'ಯನ್ನಾಗಿ ರಾಜಕಾರಣವು ಪರಿವರ್ತಿಸಿಬಿಟ್ಟಿದೆ. ಆಳುವ ಸರ್ಕಾರಗಳು ತಮ್ಮ ಅಧಿಕಾರದ ಭದ್ರತೆಗಾಗಿ ಒಂದೆಡೆ ಬಂಡವಾಳಗಾರರನ್ನೂ ಮತ್ತೊಂದೆಡೆ 'ಮತೀಯಶಕ್ತಿ'ಗಳನ್ನೂ ಅವಲಂಬಿಸಿರುವುದರಿಂದ ಸ್ವತಂತ್ರಭಾರತದ ಆಡಳಿತದ ನೀತಿ,

ನಿಯಮಗಳಲ್ಲಿ ಈ ಎರಡೂ ಶಕ್ತಿಗಳು ಒಳ ಸೇರಿ ತಮ್ಮ ಹಿತಾಸಕ್ತಿಗೆ ಆಳುವವರ್ಗವನ್ನು ಮಣಿಸುವಷ್ಟು ಪ್ರಬಲವಾಗಿವೆ. ಮತೀಯ ಶಕ್ತಿಗಳನ್ನು ಓಲೈಸುವುದೇ ತಮ್ಮ ಕುರ್ಚಿ ಭದ್ರತೆಗೆ ದಾರಿ ಎಂಬ ನೀತಿ ಇಂದು ದೇಶದಾದ್ಯಂತ ಕಾಣುವ ರಾಜನೀತಿಯಾಗಿದೆ.

ಯಾರು ದೇಶದ ಆಡಳಿತ ಸೂತ್ರ ಹಿಡಿಯಬೇಕು ಎಂಬುದರಿಂದ ಹಿಡಿದು ಪ್ರಜೆಗಳೆಲ್ಲ ಏನನ್ನು ನಂಬಬೇಕು, ಹೇಗೆ ಚಿಂತಿಸಬೇಕು, ನಮ್ಮ ಕಲೆ, ಸಾಹಿತ್ಯಗಳೆಲ್ಲ ಯಾವ ರೀತಿ ಅಭಿವ್ಯಕ್ತಿಗೊಳ್ಳಬೇಕು? ಅವು ಏನನ್ನು ಹೇಳಬೇಕು/ಹೇಳಬಾರದು ಎಂದು ಅಭಿವ್ಯಕ್ತಿ ಸ್ವಾತಂತ್ರ್ಯವನ್ನೆಲ್ಲ ಮೊಟಕುಗೊಳಿಸುವಂಥ ಕ್ರೂರ ನಿರಂಕುಶ ಶಕ್ತಿ ಭಾರತದ ಧಾರ್ಮಿಕ ಗುಂಪುಗಳಲ್ಲಿ ಬೆಳೆಯುತ್ತಿದೆ. ಇದಕ್ಕೆ ನಮ್ಮನ್ನು ಆಳುತ್ತಿರುವ ಜನರ ಹೇಡಿತನ, ಸ್ವಾರ್ಥಪರತೆ, ಅಧಿಕಾರದಾಹವೇ ಮುಖ್ಯ ಕಾರಣ. ಈ ದೇಶವು ಒಂದು ಕಾಲಕ್ಕೆ ತನ್ನನ್ನು ''ಸಮಾಜವಾದಿ ಜನತಂತ್ರಾತ್ಮಕ ಸಾರ್ವಭೌಮ ಗಣರಾಜ್ಯ''ವೆಂದು ಹೆಮ್ಮೆಯಿಂದ ಕರೆದುಕೊಳ್ಳುತ್ತಿತ್ತು. ಆದರೆ ಈ ಆಣಿಮುತ್ತುಗಳೆಲ್ಲ ಇಂದು ಕಳಪೆ ಕೃತಕ ಮಣಿಗಳಾಗಿ ಇರಾನ್, ಬಾಂಗ್ಲಾದೇಶಗಳಂಥ ಧಾರ್ಮಿಕ ಆಡಳಿತವುಳ್ಳ ದೇಶಗಳಲ್ಲಿ ಕಾಣುತ್ತಿದ್ದ ನಿರಂಕುಶ ಧಾರ್ಮಿಕ ಸಂಪ್ರದಾಯಿಕ ಕ್ರೌರ್ಯಗಳು ಭಾರತದಂಥ ದೇಶದಲ್ಲಿ ಬಹುಧಾರ್ಮಿಕ ನಿರಂಕುಶತೆಯಾಗಿ ಬೆಳೆಯುತ್ತಿರುವುದು ಚರಿತ್ರೆಯ ವಿಡಂಬನೆಯೇ ಸರಿ.

ಮುಸ್ಲಿಮರು, ಕ್ರೈಸ್ತರು, ಸಿಕ್ಖರು, ಹಿಂದೂಗಳಾದಿಯಾಗಿ ದೇಶದ ಪ್ರತಿಯೊಂದು ಧರ್ಮ, ಜಾತಿ, ಉಪಜಾತಿಗಳ ಜನರು ಭಾವನಾತ್ಮಕವಾಗಿ ಇತರರ ಬಗ್ಗೆ, ಸ್ವವಿಮರ್ಶೆಗೆ ಅವಕಾಶವಿಲ್ಲದಂತೆ ವಿದ್ವೇಷಭಾವವನ್ನು ತಳೆದಿರುವುದಕ್ಕೆ ಅನೇಕ ನಿದರ್ಶನಗಳು ದೇಶಾದ್ಯಂತ ಕಾಣಸಿಗುತ್ತವೆ. ಸಿಖ್ಖರ ಪವಿತ್ರ ಧಾರ್ಮಿಕ ಗ್ರಂಥವಾದ ಗ್ರಂಥಸಾಹಿಬ್ ಅನ್ನು ಕುರಿತಂತೆ ಪಿ.ಎಚ್.ಡಿಗಾಗಿ ಸಂಶೋಧನೆ ನಡೆಸಿ, ತಮ್ಮ ಕೃತಿಗಳನ್ನು ಪ್ರಕಟಿಸಿದ ಇಬ್ಬರು ವಿದ್ವಾಂಸರಾದ ಡಾ|| ಪಿಯರ್‌ಸಿಂಗ್ ಮತ್ತು ಡಾ|| ಪಿಶೋರಾಸಿಂಗ್‌ರಿಗೆ ಅಕಾಲ್‌ತಖ್ತ್ ಜತೇದಾರ್‌ನ ಧರ್ಮಾಧಿಕಾರಿಗಳು ಬಹಿಷ್ಕಾರ ಸಾರಿದ್ದಾರೆ. ಗುರುವಿನ ದಿವ್ಯವಾಣಿಯನ್ನು ಅದರ ಅಲೌಕಿಕ ನೆಲೆಯನ್ನು ಬಿಟ್ಟು, ಕಾಲಕಾಲಕ್ಕೆ ಪರಂಪರೆಯಿಂದ ಪರಿಷ್ಕರಿಸುತ್ತ ಬಂದ ಗ್ರಂಥವೆಂದು ತೋರಿಸಿಕೊಟ್ಟದ್ದೇ ಈ ವಿದ್ವಾಂಸರು ಎಸಗಿದ ಅಪರಾಧ. ತಮ್ಮ ಪವಿತ್ರಗ್ರಂಥವು ಸಂಶೋಧನೆಗೆ ವಸ್ತುವಾಗಬಾರದು ಎಂದು ಇದಕ್ಕಾಗಿ ನೇಮಕಗೊಂಡಿದ್ದ ಪರಿಶೀಲನಾ ಸಮಿತಿ ಸಾರಿದೆ. ಆ ಪ್ರಕಟಿತ ಗ್ರಂಥಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಇದರಿಂದ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಜಗತ್ತಿನಾದ್ಯಂತ ಸಿಖ್ ಧರ್ಮದ 'ಬಗ್ಗೆ ಸಂಶೋಧನಾ ನಿರತರಾದ 700-800 ಜನರು ದಿಕ್ಕುಗೆಡುವಂತಾಗಿದೆ.

ಈ ಸ್ಥಿತಿ ಉತ್ತರಕ್ಕಷ್ಟೇ ಪಂಜಾಬಿಗಷ್ಟೇ ಸೀಮಿತವಾಗಿಲ್ಲ. ದಕ್ಷಿಣದ ಕೇರಳದಲ್ಲಿ, ಅತಿಹೆಚ್ಚು ವಿದ್ಯಾವಂತರಿರುವ, ಅತ್ಯಂತ ತೀವ್ರವಾದ ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆಗಳಿರುವ ಸ್ಥಳದಲ್ಲೂ ಇಂಥದೇ ಸ್ಥಿತಿ ಉದ್ಭವಿಸಿದೆ. ಪ್ರಸಿದ್ಧ ಮಲೆಯಾಳಿ ಲೇಖಕ ಪಾಲ್ ಜ಼ಕಾರಿಯಾ ಅವರು ಬರೆದ ಸಣ್ಣಕಥೆಯೊಂದು ಏಸುಕ್ರಿಸ್ತನನ್ನು ಹೀನಾಯವಾಗಿ ಚಿತ್ರಿಸಿದೆಯೆಂದು ಕ್ಯಾಥೋಲಿಕ್ ಚರ್ಚಿನ ಧರ್ಮಾಧಿಕಾರಿಗಳು ಆ ಲೇಖಕರ ವಿರುದ್ಧ ಆಕ್ರೋಶಗೊಂಡಿದ್ದಾರೆ. ಕ್ರೈಸ್ತ ಧರ್ಮಕ್ಕೆ, ಇಸ್ಲಾಮಿಗೆ, ಕ್ರಿಸ್ತನಿಗೆ, ಮಹಮ್ಮದನಿಗೆ ಅಪಚಾರವಾಯಿತೆಂದು ಆಯಾಧಾರ್ಮಿಕ ವಲಯಗಳು ಲೇಖಕರನ್ನು ಕೋರ್ಟಿ ಗೆಳೆಯುತ್ತಿರುವ ಪ್ರಕಿಯೆ ಕೇರಳಕ್ಕೆ ಹೊಸದೇನಲ್ಲ. ಸಿಂಧೂ ನಾಗರಿಕತೆಯ ಚಿತ್ರವೊಂದರ ವಿರುದ್ಧ ದೆಹಲಿ ಜನ ತೋರಿದ ವಿರೋಧ, ಕಲಾವಿದ ಹುಸೇನರ ಮೇಲಾದ ಆಕ್ರಮಣಗಳೂ ಮತೀಯ ಭಾವನೆಯಿಂದಲೇ ಪ್ರೇರಿತವಾದಂಥವು. ದೂರದ ಇರಾನಿನಲ್ಲಿ ಒಬ್ಬ ಆಯಾತುಲ್ಲಾ ಖೊಮೇನಿ ಸಲ್ಮಾನ್ ರಶ್ದಿಯಂಥ ವಿದೇಶವಾಸಿ ಲೇಖಕನ ಕೃತಿಯನ್ನು ನಿಷೇಧಿಸಿ, ಅವನಿಗೆ ಪ್ರಾಣದಂಡನೆ ವಿಧಿಸಿ, ಅವನ ವೈಯಕ್ತಿಕ ಬದುಕನ್ನೂ, ಸೃಜನಶೀಲ ವಿಶ್ವಾಸವನ್ನೂ ನುಚ್ಚುಗಿಸಬಹುದು. ಬಾಂಗ್ಲಾದ ಲೇಖಕಿ ತಸ್ಲೀಮಳು ಬರೆದ ಕಾದಂಬರಿಯೊಂದು, ಧರ್ಮಲಂಡತೆಯ ಆರೋಪಕ್ಕೆ ಒಳಗಾಗಿ ಆಕೆ ತನ್ನ ದೇಶಬಿಟ್ಟು ಪರಾರಿಯಾಗುವಂತೆ ಮಾಡಬಹುದು. ಇಂಥ ಧರ್ಮನಿರಂಕುಶತೆ ಎಲ್ಲೋ ದೂರದಲ್ಲಿದೆ ಎಂದು ನಾವು ಭಾವಿಸುವಂತಿಲ್ಲ. ನಮ್ಮದೇ ಕರ್ನಾಟಕದಲ್ಲಿ ಸಣ್ಣಪುಟ್ಟ ಅಂಶಗಳೂ ಜನರ ಧಾರ್ಮಿಕ ಭಾವನೆಗಳನ್ನು ನೋಯಿಸಿಬಿಡುತ್ತವೆ. ತಕ್ಷಣ ಅವರು ಅದಕ್ಕೆ ಕಾರಣರಾದವರನ್ನು ದಂಡಿಸುವ ಅಧಿಕಾರವನ್ನು ತಾವೇ ಕೈಗೆತ್ತಿಕೊಳ್ಳುತ್ತಾರೆ, ಇಲ್ಲವೆ ತಮ್ಮ ಚದುರಂಗದಾಟಕ್ಕೆ ಆಳುವ ಸರ್ಕಾರಗಳನ್ನು ಪಾನುಗಳನ್ನಾಗಿ ಮಾಡಿಕೊಳ್ಳುತ್ತಾರೆ. ಡೆಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಂದ ಕಥೆಯೊಂದಕ್ಕೆ ಮುಸ್ಲಿಮರು ಕಿಡಿಕಾರಿದ್ದು, ಮಾಸ್ತಿಯವರ 'ಚಿಕ್ಕವೀರರಾಜೇಂದ್ರ' ಕಾದಂಬರಿಗೆ ಜ್ಞಾನಪೀಠಪ್ರಶಸ್ತಿ ಬಂದಾಗ ಜನರು ಕುದ್ದಿದ್ದು, ಆ ಕೃತಿಯು ದೂರದರ್ಶನದಲ್ಲಿ ಧಾರಾವಾಹಿಯಾಗಿ ಬಾರದಂತೆ ತಮ್ಮ ಧಾರ್ಮಿಕ ಶಕ್ತಿಯನ್ನು ಪ್ರದರ್ಶಿಸಿದ್ದು, ಎಚ್.ಎಸ್.ಶಿವಪ್ರಕಾಶರ 'ಮಹಾಚೈತ್ರ' ಪಠ್ಯ ಪುಸ್ತಕವಾಗದಂತೆ ನೋಡಿಕೊಂಡದ್ದು ಹಾಗೂ ಇತ್ತೀಚೆಗೆ ಪಿ.ವಿ.

ನಾರಾಯಣರ 'ಧರ್ಮಕಾರಣ'ಕ್ಕೆ ಮುಟ್ಟುಗೋಲು ಹಾಕಿಸುವಲ್ಲಿ ಜಯಶೀಲರಾಗಿರುವುದು - ಇವೆಲ್ಲ ಕರ್ನಾಟಕ ಹೇಗೆ ಮತೀಯ ನಿರಂಕುಶತೆಯೆಡೆಗೆ ದಾಪುಗಾಲಿಡುತ್ತಿದೆ ಎಂಬುದಕ್ಕೆ ಸೂಚನೆ ನೀಡುತ್ತವೆ. ''ಪೂಜಾರಿ ಕೃಷ್ಣ'' ಎಂಬ ದಡ್ಡ ಚಿತ್ರವೊಂದು ಬ್ರಾಹ್ಮಣರ ಮನನೋಯಿಸಿತೆಂದು ಮೆರವಣಿಗೆ ನಡೆಸಿದಾಗ ಮಾಜಿ ಮುಖ್ಯಮಂತ್ರಿಗಳೇ ಅದರ ನೇತೃತ್ವ ವಹಿಸಿದ್ದುದನ್ನು ನೆನೆಯಬಹುದು.

ಸಾಹಿತ್ಯ, ಕಲೆಗಳು ಕಲ್ಪನೆಯ, ಪ್ರತಿಭೆಯ ಮುಕ್ತ ಅಭಿವ್ಯಕ್ತಿಯ ಕ್ಷೇತ್ರಗಳು. ಒಂದು ಸಂಸ್ಕೃತಿಯನ್ನು ಬೆಳೆಸುವ ಪ್ರಮುಖ ಸಾಧನಗಳು. ಆದರೆ ಧಾರ್ಮಿಕ ಸಾಹಿತ್ಯವೋ, ಧಾರ್ಮಿಕ ನಾಯಕರೋ ಈ ಕಲೆ, ಸಾಹಿತ್ಯಗಳಿಗೆ ವಸ್ತುಗಳಾದಾಗ ಅವು ಸೂಕ್ಷ್ಮವಾದ ರೂಪಕಾತ್ಮಕ ನೆಲೆಯಲ್ಲಿ ರೂಪತಳೆದಿರುತ್ತವೆ. ಅವುಗಳ ಸೃಷ್ಟಿಯ ಪೂರ್ಣ ಹೊಣೆ ಲೇಖಕರದು, ಕಲಾವಿದರದೇ ಆಗಿರುತ್ತದೆ. ಒಂದು ಮುಕ್ತ ಸಾಂಸ್ಕೃತಿಕ ಪರಿಸರದಲ್ಲಿ ಮಾತ್ರವೇ ನಿಜವಾದ ಅಭಿವ್ಯಕ್ತಿಯ ಪ್ರಬುದ್ಧತೆ ಸಾಧ್ಯವಾದೀತು. ಆದರೆ ಕರ್ನಾಟಕದಲ್ಲಿ ಮತೀಯ ಹಾಗೂ ಆಳುವ ಶಕ್ತಿಗಳು ಒಗ್ಗೂಡಿ ಇಂಥ ವಾತಾವರಣದ ನಿರ್ನಾಮಕ್ಕೆ ಸಿದ್ಧವಾದಂತೆ ತೋರುತ್ತಿದೆ. ಬೌದ್ಧಿಕ ಆಸಕ್ತಿಯಾಗಲಿ, ಅಧ್ಯಯನ ಶೀಲತೆಯಾಗಲಿ, ಕಲೆ, ಸಂಸ್ಕೃತಿಗಳ ಅರಿವಾಗಲಿ ದೇಶದ ಬಹುಮುಖಿ ಸಂಸ್ಕೃತಿಯ ಅರಿವಾಗಲಿ ಇಲ್ಲದಿರುವಂಥ ವ್ಯಕ್ತಿಗಳು ರಾಜಕೀಯ ನಿರ್ಣಯಗಳನ್ನು ಕೈಗೊಳ್ಳುತ್ತಿರುವುದರ ಫಲವಾಗಿ ಪರಸ್ಪರ ವಿರುದ್ಧವಾದ ಕಾರ್ಯವಿಧಾನಗಳು ಹುಟ್ಟಿಕೊಳ್ಳುತ್ತವೆ. ಚಂದ್ರಗುತ್ತಿಯಲ್ಲಿ ಹಿಂದೂಧಾರ್ಮಿಕ ನಂಬಿಕೆಯ ಒಳಗೇ ನಡೆವ ಬೆತ್ತಲೆ ಸೇವೆಯ ವಿರುದ್ಧ ಕಠೋರ ನಿಷೇಧ ಹೇರಿ ಪೋಲೀಸು ಪಡೆ ಬಳಸಿ ಪ್ರತಿವರ್ಷ ಬಗ್ಗುಬಡಿಯುವ ಸರ್ಕಾರವೇ ವಿಶ್ವಸುಂದರಿ ಸ್ಪರ್ಧೆಗೆ ಕಚ್ಚೆಕಟ್ಟಿ ನಡೆಸಿಯೇ ತೀರುವೆನೆಂದು ಸಂಕಲ್ಪಸಿದ್ಧತೆ, ಪೋಲೀಸು ಶಕ್ತಿಗಳನ್ನು ತೋರಿಸುವಲ್ಲಿ ಇರುವ ವಿಪರ್‍ಯಾಸ ಆಳುವವರಿಗೆ ಕಾಣಿಸುವುದೇ ಇಲ್ಲ. ಎರಡೂ ಸಂದರ್ಭಗಳಲ್ಲಿ 'ಹೆಣ್ಣಿನ ಬಗ್ಗೆ' ತಳೆದ ನಿಲುವು ಇಂಥ ದ್ವಂದ್ವ ನೀತಿಗೆ ಉದಾಹರಣೆ. ಇಂಥ ಇಬ್ಬಂದಿ ನೀತಿಗೆ ಸ್ವತಂತ್ರ ಸೃಜನಶೀಲ ಕೃತಿಗೂ, ಕೃತಿಚೌರ್ಯಕ್ಕೂ ಇರುವ ಅಂತರಕೂಡ ಕಾಣದೇ ಹೋಗುವುದರಲ್ಲಿ ಆಶ್ಚರ್ಯವಿದೆಯೇ?

ಸಾಲದ್ದಕ್ಕೆ ಕನ್ನಡದಲ್ಲಿ ಪ್ರಕಟವಾಗುವ ಎಲ್ಲ ಗ್ರಂಥಗಳಲ್ಲಿ ಪತ್ರಿಕೆ ಹಾಗೂ ನಿಯತಕಾಲಿಕಗಳಲ್ಲಿ ಬರುವ ಯಾವೆಲ್ಲ ಬರಹಗಳು ಯಾರ್‍ಯಾರ ಧಾರ್ಮಿಕ ಮನಸ್ಸುಗಳನ್ನು ನೋಯಿಸುವಂತಿವೆ ಎಂದು ಪತ್ತೆಹಚ್ಚಿ, ಅದಕ್ಕೆ ಕಾರಣರಾದವರನ್ನು ದಂಡಿಸಲು ಒಂದು ಪತ್ತೇದಾರ ಧಾರ್ಮಿಕ ಸಮಿತಿಯನ್ನೂ ನೇಮಿಸಲು ನಮ್ಮ ಸರ್ಕಾರ ಯೋಚಿಸಿದೆಯಂತೆ! ಅಷ್ಟಾದರೆ ಇನ್ನು ಮುಂದೆ ಲೇಖಕರು, ಈ ಆಳುವ ಮಂದಿಗೆ ಅರ್ಜಿ ಹಾಕಿ, ಸಿನಾಪ್ಸಿಸ್ ಅರ್ಪಿಸಿ, ಅವರ ಅನುಮತಿ ಪಡೆದು ಮುಚ್ಚಳಿಕೆ ಬರೆದುಕೊಟ್ಟು ನಂತರ ಕಥೆ, ಕಾದಂಬರಿ, ಕವಿತೆಗಳನ್ನು ಬರೆಯಬೇಕಾದ ದಿನಗಳೂ ಬರಲು ದೂರವಿಲ್ಲ. ಕರ್ನಾಟಕವು ತಮಿಳರು ಆಡಿಕೊಳ್ಳುವಂತೆ ''ಶುದ್ಧ ಕರ್ನಾಟಕಂ'' (ಶುದ್ಧಗೊಡ್ಡು) ಎಂದು ತನ್ನನ್ನು ತೋರಿಸಿಕೊಂಡು ಭಾರತದ ಸ್ವಾತಂತ್ರ್ಯದ ಐವತ್ತರ ಗಳಿಗೆಗೆ ದೊಡ್ಡ ಕಾಣಿಕೆಯನ್ನೇ ನೀಡಿದಂತಾಗುತ್ತದೆ! ಜೈ ಕರ್ನಾಟಕ ''ಮಾತೇ''.

- ಬಿ.ಎನ್. ಸುಮಿತ್ರಾಬಾಯಿ

ಮತ್ತೆ ಮೊಳಗಲಿ

ನಮ್ಮ ಧೀಮಂತ
ಮಂತ್ರವಾದ
ಸಹಿಷ್ಣುತೆ
ದೀಪಹಚ್ಚಿ ಹುಡುಕ ಬೇಕಾಗಿದೆ
ಇಂದು ನಾವು
ಸಹನೆ ಎಂಬ
ತತ್ವಸಾರವನ್ನೇ ತಿರುಚಿ
ದ್ವೇಷದ ರಾಜಾರೋಷ
ಗದ್ದಲ ಗೊಂದಲದ
ವಿಚ್ಛಿದ್ರಕಾರಕ
ಅಸ್ತ್ರವಾಗಿಸಿಕೊಂಡ
ಸ್ವಾರ್ಥಿಗಳ ಧರ್ಮಬಾಹಿರ
ಕೃತ್ಯಗಳ ತಡೆಯಲು
ಸಂಯಮದಿಂದಲೇ....
ದೀಪಹಚ್ಚಿ ಹುಡುಕಬೇಕಾಗಿದೆ
ಮತ್ತೆ ಬುದ್ಧನು ಹುಟ್ಟಿ
ಈ 'ಸತ್ವ ಉದ್ಘೋಷವಾಗುವವರೆಗು'
ದೀಪಹಚ್ಚಿ ಹುಡುಕಬೇಕಾಗಿದೆ.

-ರಜಿಯಾ ಡಿ.ಬಿ.

ದೇವದಾಸಿಯರು ಮತ್ತು ನಮ್ಮ ಸಮಾಜ



"ಚಂದ್ರಗುತ್ತಿಯ ಎಲ್ಲಮ್ಮ ದೇವಿ"

ಮಧ್ಯಕಾಲೀನ ಕರ್ನಾಟಕದ ಸಂದರ್ಭದಲ್ಲಿ ಸೈದ್ಧಾಂತಿಕ ಬೆಳವಣಿಗೆಗಳು ಕಂಡುಬರುತ್ತವೆ. ಈ ವೇಳೆಗೆ ವೇದಾಂತದ ವಲಯದಲ್ಲಿ ರಾಮಾನುಜಾಚಾರ್ಯ ಮೊದಲಾಗಿ ಮಧ್ವಾಚಾರ್ಯರೂ ಹೊಸಸಿದ್ಧಾಂತಗಳ ಕಡೆಗೆ ಗಮನ ಕೊಟ್ಟರು. ಇದರ ಫಲವಾಗಿ ಎನ್ನುವಂತೆ ಹಳೆಯ ಸಂಪ್ರದಾಯಗಳು ಹೊಂದಿಕೊಳ್ಳ ತೊಡಗಿದವೆಂದು ಕಂಡು ಬರುತ್ತದೆ. ಇವುಗಳಲ್ಲಿ ಬುಡಕಟ್ಟು ಜನಾಂಗಗಳ ಮೇಲೆ ಒತ್ತಡ ಉಂಟಾಗಿ ಅದರ ಫಲವಾಗಿ ದ್ವೈತಾದ್ವೈತಗಳು ಪ್ರಬಲವಾಗತೊಡಗಿದುವು. ಶೈವಸಂಪ್ರದಾಯ ಗಳಲ್ಲಿ ಕೂಡ ಹುರಿಗೊಂಡಂತೆ ಶಕ್ತಿ ವಿಶಿಷ್ಟಾದ್ವೈತವು ಬೆಳದಂತೆ ಕಂಡುಬರುತ್ತದೆ. ಅಂದರೆ ವೇದಾಂತದ ವರವಾದ ಜಾತಿಧರ್ಮಗಳು ಅಭಿವೃದ್ಧಿಯಾಗ ತೊಡಗಿದವು. ಇಂತಹ ಹಿನ್ನಲೆಯಲ್ಲಿಯೇ ಕಲ್ಯಾಣದ ಕ್ರಾಂತಿಯು ವಿಫಲವಾಗಿ ಮತ್ತೊಂದು ಸ್ಥಿರ ಧಾರ್ಮಿಕ ರೂಪವನ್ನು ತಾಳಬೇಕಾಯಿತು.

ಇಂಥ ಹಿನ್ನೆಲೆಯಲ್ಲಿ ಹಳ್ಳಿಗಾಡುಗಳಲ್ಲಿದ್ದ ಬುಡಕಟ್ಟು ಜನಾಂಗಗಳು ತಮ್ಮ ಅಸ್ತಿತ್ವಕ್ಕಾಗಿ ಪುರಾಣಪ್ರತ್ಯಯಗಳನ್ನು ಅಳವಡಿಸಿಕೊಳ್ಳತೊಡಗಿದುವೆನ್ನಬಹುದು - ಈ ಬಗೆಯನ್ನು ಗುರುತಿಸುವಲ್ಲಿ ರೇಣುಕಾ ಪುರಾಣಂ - ಒಂದು ವಿಶಿಷ್ಟವಾದ ಗತಿಯಲ್ಲಿ ಪರಿಣಾಮಕಾರಿಯಾಗಿ ಇಂದಿಗೂ ಓಂದುಳಿದ ಪ್ರದೇಶಗಳಲ್ಲಿ ಜೀವಂತವಾಗಿದ್ದು ಆಧುನಿಕ ವಿದ್ವಾಂಸರು ಇದರ ಬಗೆಗಳನ್ನು ಪರಿಶೀಲಿಸಲು ತೊಡಗಿದ್ದಾರೆ.

ಮುಖ್ಯವಾಗಿ ರೇಣುಕಾ ಮಹಾತ್ಮ್ಯ ಅಥವಾ ಪುರಾಣವು ಸಂಕೀರ್ಣವಾಗಿರುವಂತೆ ಧ್ವನಿಸುತ್ತದೆ. ಇದರ ಉದ್ದಿಶ್ಯವು ನೇರವಾಗಿ ಹಳೆಯದಾದ ಅಂದರೆ ಪಾಶುಪತದಲ್ಲಿ ಕಾಣಿಸಿಕೊಂಡಿದ್ದ ಲೈಂಗಿಕ ಆರಾಧನೆಯು (Phalic worship of both male and female types) ಇನ್ನೂ ಮುಂದುವರಿಯುವಲ್ಲಿ ಒಂದು ಸಂಕೀರ್ಣ ಪುರಾಣ ಮತ್ತು ಐತಿಹ್ಯಗಳ ಹೊಂದಾಣಿಕೆಯನ್ನು ಒಳಗೊಳ್ಳತೊಡ ಖಚಿತವಾಗುತ್ತಿದೆ.

ಜಮದಗ್ನಿಯ ಸಂಬಂಧವು ಮೇಲು ವರ್ಗಕ್ಕೆ ಸೇರಿದ ವಿಷಯವಾಗಿದೆ. ಆದರೆ ಇದು ಸ್ಪಷ್ಟವಾಗಿ ಪಿತೃಪ್ರಧಾನವಾದ ಸಂಪ್ರದಾಯ. ಇದರ ಸಂಗಡ ಸಾಮಾನ್ಯವಾಗಿ ಬುಡಕಟ್ಟು ಜನಾಂಗಗಳಲ್ಲಿ ಕಂಡುಬರುವ ಮಾತೃಪ್ರಧಾನತೆಯು ಸೇರಿಕೊಂಡಂತೆ ಕಥಾನಕವೇ ಬೆಳೆದಿರುತ್ತದೆ. ಜಮದಗ್ನಿಯ ಪತ್ನಿ ರೇಣುಕೆ - ಈಕೆ ಮಾತೃ ಪ್ರಧಾನತೆಯ ವರ್ಗಕ್ಕೆ ಸೇರಿದವಳು. ನರ್ಮದಾ ನದಿಯಲ್ಲಿ

ಜಲಕ್ರೀಡೆಯಾಡುತ್ತಿದ್ದ ಕಾರ್ತವೀರ್ಯಾರ್ಜುನನನ್ನು ಕಂಡವಳು ಆತನ ಶೃಂಗಾರ ವೈಭವವನ್ನು ಮನಸ್ಸಿಗೆ ತಂದುಕೊಂಡಿರಬಹುದು. ಆದುದರಿಂದ ಆಕೆ ನೀರು ತರಲು ಹೋಗಿದ್ದವಳು ತಡವಾಗಿ ಬಂದಾಗ ಗಂಡನಾದ ಜಮದಗ್ನಿಗೆ ತನ್ನ ಅಹ್ನಿಕಕ್ಕೆ ಆತಂಕವಾದಂತೆ ಸಿಟ್ಟಿಗೆದ್ದು ಆಕೆಯನ್ನು ಶಪಿಸುವುದಲ್ಲದೆ ಮಗನನ್ನ ಕರೆದು ಆಕೆಯ ತಲೆ ಹಾರಿಸಲು ಅಪ್ಪಣೆ ಮಾಡುತ್ತಾನೆ. ಮಗನು ಅದರಂತೆ ನಡೆದು ಕೊಂಡು ನಿಂತಾಗ ತಂದೆಗೆ ಸಂತೋಷವಾಗಿ ಮಗನಿಗೆ ವರ ಕೊಡಲು ಸಿದ್ಧನಾಗುತ್ತಾನೆ. ಆದುದರಿಂದ ಮಗನಾದ ಪರಷುರಾಮನು ತಾಯಿಯ ಪ್ರಾಣದಾನವನ್ನು ಕೇಳುತ್ತಾನೆ. ತಥಾಸ್ತು- ಎಂದಾಗುವುದರಿಂದ ರೇಣುಕಿಯು ಸಜೀವಳಾಗುತ್ತಾಳೆ. ಅಲ್ಲಿಂದ ಮುಂದೆ ಬುಡಕಟ್ಟು ಜನಾಂಗಗಳು ಆಕೆಯ ಪೂಜೆಯನ್ನು ಇಂದಿಗೂ ಉಳಿಸಿಕೊಂಡು ಬಂದಿವೆ. ಮುಂದೆ ಪರಷುರಾಮನು ಅವತಾರಿಯಾಗಿ ಕ್ಷತ್ರಿಯ ರಾಜರನ್ನೆಲ್ಲಾ ಕೊಲೆ ಮಾಡುತ್ತಾ ಮೆರೆಯುತ್ತಾನೆ. ಈತ ದಶಾವತಾರಗಳಲ್ಲಿ ಒಬ್ಬನಾಗಿ ಭಾಗವತ ಸಂಪ್ರದಾಯದ ಆರಾಧನೆಯಲ್ಲಿ ಸೇರಿ ಹೋಗುತ್ತಾನೆ. ಅಂದಿನ ಬಯಲಾಟಗಳಲ್ಲಿ ಧಾರ್ಮಿಕ ಆಚರಣೆಯ ಸಹಿತವಾಗಿ ಭಾಗವತವು ಸೇರಿ ಹೋಗಿದ್ದಲ್ಲದೆ ಒಂದು (ಸಾಂಸ್ಕೃತಿಕ) ಆಕಾರವಾಗಿ ಬಂದಿದೆಯಷ್ಟೆ.

ಹೀಗೆ ಸಮಕಾಲಿಕ ವೇದಾಂತಗಳನ್ನು ಒಪ್ಪಿದ ಮೇಲುವರ್ಗ ದವರೊಡನೆ ಗಂಭೀರವಾಗಿಯೇ ಉಳಿದುಕೊಂಡು ಬರುವುದು ಈ ಪುರಾಣಕ್ಕೆ ಸಾಧ್ಯವಾಗಿವೆ.

ರೇಣುಕಾಮಹಾತ್ಮೆಯು ಹಳೆಯದಾದ ಪಾಶುಪತ ಆರಾಧನೆ ಯನ್ನು ರಕ್ಷಿಸಿದ್ದಲ್ಲದೆ ಉಳಿದುಕೊಳ್ಳುವಂತೆ ಆಗಿರುವುದು ನಮಗೆ ಮುಖ್ಯ. ಈ ಮಹಾತ್ಮೆಯ ವಿವರಗಳು ಹೀಗಿವೆ :

1. ರೇಣುಕೆಯ ಶಿರಚ್ಛೇದದ ಅಂಶ ಸಹಿತವಾಗಿ ರುಂಡ ಮತ್ತು ಮುಂಡಭಾಗಗಳು ಇಂದಿಗೂ ಎರಡು ಸಂಕೇತಗಳಾಗಿ ಉಳಿದಿವೆ.

2. ರುಂಡವು - ಮಾತಂಗಿಯಾಗಿದ್ದಾಳೆ ಮತ್ತು ಮುಂಡವಾಗಿ ರೇಣುಕೆಯು ಕಮಲ ಗಂಗವ್ವ- ಎಂದು ಉಳಿದಿದ್ದಾಳೆ.

3. ಪ್ರಚುರದಲ್ಲಿರುವ ಕಥಾಭಾಗದಲ್ಲಿ ಆರಾಧನೆಯ ಮೊದಲು ಮಾತಂಗಿಗೆ - ನಗ್ನ ಸೇವೆ ಕೂಡ ನಡೆಯುತ್ತದೆ. ನಂತರ ಅಲ್ಲಿ ಸೀರೆಯನ್ನು ಸ್ವೀಕರಿಸಿದ ಹೆಣ್ಣು ಮಗಳು ಮುಂದೆ ರೇಣುಕೆಯು ಮರೆಯಾದಳು ಎಂದು ಐತಿಹ್ಯವಿರುವ ಕಲ್ಲುಪಡೆಯಲ್ಲಿ ಪೂಜೆ ಸಲ್ಲಿಸುತ್ತಾಳೆ. ಇದನ್ನು ಗಂಭೀರವಾಗಿ ಕುಂಡೆ ಪೂಜೆ ಎನ್ನುತ್ತಾರೆ.

ಈ ಬಗೆಯ ಪೂಜೆಯು ಪ್ರಧಾನವಾಗಿ ಬುಡಕಟ್ಟು ಜನಾಂಗ ಗಳಲ್ಲಿ ಬಳಕೆಯಲ್ಲಿದೆ.

ರೇಣುಕಾ ಮಹಾತ್ಮ್ಯದ ಕೇಂದ್ರಗಳು ಮಧ್ಯಕಾಲೀನ ಇತಿಹಾಸ ದಲ್ಲಿಯೂ ಜೀವಂತವಾಗಿದ್ದು ಆಧುನಿಕ ಕಾಲದ ಸಮಸ್ಯೆ (puzzle) ಯಾಗಿಯೂ ಉಳಿದಿವೆಯಷ್ಟೆ.

ಆ ಜನಾಂಗಗಳಲ್ಲಿ ಆಧುನಿಕ ತಿಳುವಳಿಕೆಯು ಇಲ್ಲದುದರಿಂದ ಮೂಢನಂಬಿಕೆಯಾಗಿ ಇಂದಿಗೂ ಗೊಂದಲವನ್ನುಂಟು ಮಾಡುತ್ತಿದೆ. ಏಳುಕೊಳ್ಳದ ಎಲ್ಲಮ್ಮನೆಂದು ಸೌದತ್ತಿಯಲ್ಲಿ ಮತ್ತು ರೇಣುಕಮ್ಮನ ಪೂಜೆಯೆಂದು ಚಂದ್ರಗುತ್ತಿಯಲ್ಲೂ ಪ್ರಸಿದ್ಧವಾಗಿರುವ ಪೂಜೆ ಜಾತ್ರೆಗಳು ಅದ್ದೂರಿಯಿಂದ ಇಂದಿಗೂ ಜರುಗುತ್ತಿವೆ. ಈ ಜನಗಳ ಅಜ್ಞಾನವು 'ಛಾಲೆಂಜ್' ಆದ ಕಾರಣ ಕಾನೂನನ್ನು ಬಳಸಲಾಗಿದೆ. ಇಷ್ಟರಿಂದಲೇ ಪರಿಹಾರವಾಗಿ ಪ್ರಗತಿಯಾಗಬಹುದೆಂಬ ನಂಬಿಕೆ ಸ್ಥಿರವಾಗಿರಲಾರದು. ಹೀಗೆ ಭಾವುಕವಾದವೇ ಒಂದು ಸಾಮಾಜಿಕ ನಿಲುವಿನಷ್ಟು ಘನವಾಗಿರುವುದಂತೂ ಆತಂಕಕಾರಿಯಾಗಿದೆ. ಭಾವುಕತೆಯು ಧಾರ್ಮಿಕವಾಗುವುದರಲ್ಲಿ ಇದರ ಅಸ್ತಿತ್ವವಿರುವಂತಿದೆ.

★ ★ ★

ಕದಂಬರು ಮತ್ತು ಬಾದಾಮಿ ಚಾಲುಕ್ಯರ ಕಾಲದಲ್ಲಿ ಈಗಿನ ನಿಷಿದ್ಧ ಆಚರಣೆಗಳು ಸಾಮಾಜಕ ಹಾಗೂ ಬುಡಕಟ್ಟುಗಳ ಪೂಜಾರಿಗಳ ಅನುಮೋದನೆಯನ್ನು ಪಡೆದಿದ್ದುವು. ಆದುದರಿಂದ ರಾಜ ಮಹಾರಾಜರುಗಳು ಕೂಡ ಇದನ್ನು ಆಚರಿಸುತ್ತಿದ್ದಿರಬಹುದು. ಏಕೆಂದರೆ ಬಾದಾಮಿಯ ಮೊದಲ ಮೂರು ಗುಹೆಗಳಲ್ಲೂ ಇದಕ್ಕೆ ಅರ್ಥಗಳು ಸಿಗುತ್ತಿವೆ. ಮಹಾಕೂಟದಲ್ಲಿ ಪಾಶುಪತಪ್ರತಿಮೆಗಳು ಇದನ್ನೇ ಖಚಿತಪಡಿಸುತ್ತಿವೆ. ಕಮಲಗಂಗವ್ವನ ಮತ್ತು ಮಾತಂಗಿಯ ಆರಾಧನೆಗಳು ಅಷ್ಟು ಹಳೆಯವಾಗಿರುವಂತಿವೆ.

ಈ ಆಚರಣೆಯ ಕುಲದವರು ಈಗಲೂ ಕಂಡುಬರುತ್ತಿದ್ದಾರೆ. ದೇವದಾಸಿಗಳೆಂದು ಕರೆದುಕೊಳ್ಳುವ 'ಎಲ್ಲಮ್ಮ'ನ ಭಕ್ತೆಯರು ಇದರ ವ್ರತಧಾರಿಗಳೂ ಆಗಿರುತ್ತಾರೆ. ಏತಕ್ಕೆಂದು ವಿಚಾರಿಸಿದರೆ ಅವರಿಂದ ಬರುವ ಉತ್ತರಗಳು ಅಚ್ಚರಿಯನ್ನುಂಟು ಮಾಡುತ್ತವೆ. ಅವರು ತಮ್ಮ ದೇವರ 'ದಾಸಿ' ತನವನ್ನು ಸಮರ್ಥಿಸುತ್ತಾರೆ ಮತ್ತು ಅವರು ನಿಷಿದ್ಧ ಆಚರಣೆಗಳಲ್ಲಿ ತೊಡಗಿದ್ದಾರೆಂಬುದನ್ನು ನಂಬುವುದೇ ಇಲ್ಲ.

ನಿಷಿದ್ಧ ಆಚಾರಗಳ ಬಗ್ಗೆ ಇಷ್ಟು ಗಾಢವಾದ ವಿಶ್ವಾಸವಿಟ್ಟಿರುವುದಕ್ಕೆ ಬೇರೆ ಕಾರಣಗಳೂ ಇವೆ. ದೇಹಕ್ಕೆ ಸಂಬಂಧಿಸಿದ (ಚರ್ಮವ್ಯಾಧಿ) ತೊನ್ನು, ಕುಷ್ಠ ಮತ್ತು ನಿಗೂಢರೋಗಗಳಿಗೆ ಪರಿಹಾರವನ್ನು ಅವರು

ತಮ್ಮ ದೈವದ ಬತ್ತಲೆ ಸೇವೆಯಿಂದ ಕಂಡುಕೊಂಡವರಾಗಿದ್ದಾರೆ. ಒಬ್ಬ ಯುವಕ (ಶಿವಮೊಗ್ಗದವರು) ತಮ್ಮ ಜನತೆಯ ಹೀನಾಯದ ಆಚರಣೆಗಳಿಗೆ ಬೇಸರಿಸಿ ಕಾರಣ ಹುಡುಕಿದಾಗ ಒಬ್ಬ ತರುಣಿ ಮೂರು ಬಾರಿ (ಮೂರು ವರ್ಷ) ವರದಾನದಿಯಲ್ಲಿ ಸ್ನಾನಮಾಡಿ ಬತ್ತಲಾಗಿ 4-5 ಫರ್ಲಾಂಗ್ ದೂರದ ಗುಡ್ಡದಲ್ಲಿರುವ 'ಚಂದ್ರಗುತ್ತಿ' ದೇಗುಲದಲ್ಲಿ ಮೊದಲು ಮಾತಂಗಿಯನ್ನು ಸೇವಿಸಿ 'ಸೀರೆಯನ್ನು ಪಡೆದುಕೊಂಡು ಉಟ್ಟು ಅದರ ಮುಂದಕ್ಕಿರುವ ದೇಗುಲದಲ್ಲಿನ ಗುಹೆಯ 'ಅಮ್ಮ' ರೇಣುಕೆಯನ್ನು ಪೂಜಿಸಿ ತೀರ್ಥಪ್ರಸಾದ ಸ್ವೀಕರಿಸಿದ ಕಾರಣ ತನ್ನ ದೇಹದಲ್ಲಿ ಕಂಡಿದ್ದ ಬಿಳಿಯ ಮಚ್ಚೆಗಳು ಮಾಯವಾದುವಂತೆ. ಇದು ಕೇವಲ ಅಜ್ಞಾನವೆಂಬುದು ಆ ಯುವಕನಿಗೂ ಗೊತ್ತಿದೆಯಷ್ಟೆ. ಇದು ಒಂದು ಸರಳ ರೋಗದ ಮಾನಸಿಕತೆಗೆ ಸೇರಿದ ವಿಷಯ. ರೇಣುಕೆ ಎಂಬ, ಬಂಡೆಯಲ್ಲಿ ಒಡಮೂಡಿರುವ ಪ್ರತಿಮೆಯನ್ನ ಅವರು ತುಂಬ ಭಕ್ತಿಯಿಂದ ಪೂಜಿಸುತ್ತಾರೆ. ಜಮದಗ್ನಿಗೆ ಹೆದರಿ ಅಥವಾ ಬೇಸರಪಟ್ಟು ಆಕೆ ಆ ಗುಹೆಯಲ್ಲಿ ಅಡಗಿದಳು ಎಂದು ಅವರ ಪುರಾಣವು ಹೇಳುತ್ತದೆ. ಪೂಜಾರಿಯು 'ರುದ್ರಾಣಿ' ಸ್ತೋತ್ರ ಮಾಡಿ ಪೂಜಿಸುತ್ತಾನೆ. ತೀರ್ಥ ಪ್ರಸಾದಗಳನ್ನು ಗಂಭೀರವಾಗಿ ನೀಡುತ್ತಾನೆ. ಆ ಪ್ರತಿಮೆಯು ಸುಮಾರು 10 ಅಡಿಗಳಷ್ಟು ಹಿಂದಕ್ಕೆ ಮತ್ತು ಮುಂದೆ ಕೇವಲ 236 ಅಡಿಗಳ ತೆರವಿನಿಂದ ಪೊಟರೆಯಂತೆ ಕಾಣುತ್ತದೆ. ಅದರ ಪೂಜೆಯನ್ನು ಮಾತ್ರ ಮಾಡುವ ಹಕ್ಕುಬಾಧ್ಯತೆ ಆ ಪೂಜಾರಿಗೆ. ತೆವಳಿಕೊಂಡು ಹೋದಂತೆ ಹಿಂದಿನಿಂದ ಪ್ರತಿಮೆಯನ್ನು ತೊಳೆದು ಅಲಂಕರಿಸುತ್ತಾನೆ- ಇದನ್ನು ಪೂಜಿಸುವ ಒಕ್ಕಲಿನವರು ಕುಂಡೆ ಪೂಜೆಯೆನ್ನುತ್ತಾರೆ. ವಾಸ್ತವವಾಗಿ ಇದು ಚಾಲುಕ್ಯರ ಕಾಲದ, ಅದಕ್ಕೂ ಹಿಂದಿನ ನಿಷಿದ್ಧ ರೂಪದ ಪೂಜೆಯಾಗಿದೆ. ಇದಕ್ಕೆಲ್ಲ ಗುಪ್ತರೋಗಗಳು ಬಾಣಂತಿತನದ ಖಾಯಿಲೆಗಳು ಮುಖ್ಯವಾಗಿ 'ಸಾವು' ಕಾರಣವಾಗಿರುವಂತಿದೆ. ಇಲ್ಲಿಯ ಭಕ್ತಿ 'ರೋಗಭಯ' ದಿಂದ ಮೂಡಿರುವಂಥದು ಮಾತ್ರವಾಗಿರುವಂತಿದೆ.

ವೈದ್ಯಕೀಯ ಇತಿಹಾಸದಲ್ಲಿ ಚರಕ-ಶುಶ್ರುತರು ಬೆಳಗುತ್ತಾರೆ. ಅವರು ಶಸ್ತ್ರಚಿಕಿತ್ಸಕರೂ ಹೌದು. ರೋಗಗಳಿಗೆ ಗಿಡಮೂಲಿಕೆ ಔಷಧಿಗಳನ್ನೂ 'ರಸಾಯನ' ಮೊದಲಾದ ಪಾಕದ ಔಷಧಗಳನ್ನೂ ಅಲ್ಲದೆ ರೋಗಗಳಿಗೆ ಅನುಪಾನ ಇತ್ಯಾದಿ ನಿಯಮಗಳನ್ನು ಹೇಳಿದವರಿದ್ದಾರಷ್ಟೆ. ಆದರೆ ಅದೇ ರೀತಿಯಲ್ಲಿ ಸ್ತ್ರೀ ವೈದ್ಯೆಯರ ಹೆಸರು ಎಲ್ಲಿಯೂ ಕಂಡು ಬರುತ್ತಿಲ್ಲ. ಅಂದರೆ ಸ್ತ್ರೀಯರ ರೋಗ ರುಜಿನಗಳನ್ನು ಪರಿಶೀಲಿಸುವ ಹೊಣೆಗಾರಿಕೆಯಿರುವ ಸ್ತ್ರೀಯರು -ಹೆಸರಿಲ್ಲದವರಾದಂತಿದೆ. ಸ್ತ್ರೀಯರಿಗೆ ಔಷಧೋಪಚಾರಗಳು ತಿಳಿದಿಲ್ಲವೆಂದಲ್ಲ. ಇಂದಿಗೂ ಹೆರಿಗೆಯನ್ನು ಸುಸೂತ್ರವಾಗಿ ಕೇವಲ ಅನುಭವದಿಂದ ನಡೆಸಿಕೊಡುವ ವಿಧವೆಯರಿದ್ದಾರೆ. (ನಮ್ಮೂರಿನಲ್ಲಿ ಒಬ್ಬಾಕೆ ಅಗಸತಿ ಹೆರಿಗೆ ಮಾಡುತ್ತಿದ್ದಳು.) ಆದರೂ ಸ್ತ್ರೀಯರ, ಮಕ್ಕಳ ಸಾವುಗಳು ಹೇರಳವಾಗಿದ್ದು ಮೇಲುವರ್ಗದ ಪಂಡಿತರಂತೂ ಜೋತಿಷ್ಯಕ್ಕೆ ಶರಣಾದವರೇ ಆಗಿದ್ದರು. ಗಂಡುಹೆಣ್ಣಿನ ಬದುಕನ್ನು ಇವರೇ ಗುಣಾಕಾರ ಹಾಕಿ ದಾಂಪತ್ಯವನ್ನು ಕೂಡಿಸುತ್ತಿದ್ದುದನ್ನು ಈಗಲೂ ಕಾಣಬಹುದು. ಆದುದರಿಂದ ನ್ಯಾಯವಾದ ವೈದ್ಯ ವಿದ್ಯೆಯು ಈಗಿನಂತಲ್ಲ. ಸ್ತ್ರೀಯರು ತಮ್ಮ ಇತಿಮಿತಿಯಲ್ಲಿ ಉಪಚಾರ ಮಾಡುತ್ತಿದ್ದರೂ ಸಾಂಕ್ರಮಿಕಗಳೆಂದರೆ ಒಂದೊಂದು ರೋಗವನ್ನು ಒಂದೊಂದು 'ಅಮ್ಮ' ಎಂದು ನಂಬುತ್ತಿದ್ದವರು. ಇಲ್ಲಿ ವಿಷಯವು ಗಂಭೀರವಾದರೂ ಈ ಜನಗಳು ನಿರ್ದೋಷಿಗಳಲ್ಲದೆ ಏನೂ ಅರಿಯದವರಾದ ಕಾರಣ - ರೋಗಕ್ಕೆ ಪರಿಹಾರವು ಇರಲಿಲ್ಲ! ಆದುದರಿಂದ ಬುಡಕಟ್ಟು ಜನಾಂಗಗಳು ಈ ಬಗೆಯ ನಿಷಿದ್ಧ ಆಚರಣೆಗಳನ್ನು ಬಳಕೆಯಲ್ಲಿ ತಂದುಕೊಂಡು ಹೆಚ್ಚು ಪಾಲು ದೈವಗಳಿಗೆ ಶರಣಾಗುತ್ತಿದ್ದರಷ್ಟೆ.

ಇದನ್ನೇನೋ ನಾವೀಗ ಕ್ಷಮಿಸಬಹುದು. ಆದರೆ ಈ ಮುಗ್ಧ ಜನರನ್ನು ಅಜ್ಞಾನದಿಂದ ಬಿಡುಗಡೆಗೆ ಒಯ್ಯದಿದ್ದಲ್ಲಿ ನಾವೂ ಮೂಢರೇ ಆಗುತ್ತೇವೆ ಎನ್ನಿಸಿದೆ.

1. ಮೊದಲೇ ಹೇಳಿದಂತೆ ಎಲ್ಲಮ್ಮನ ಅಥವಾ ರೇಣುಕಮ್ಮನ ಆರಾಧನೆಯು ಸ್ತ್ರೀ ಬಲಿಯನ್ನು ಗಂಭೀರಗೊಳಿಸಿ ಆಚರಣೆಯ ರೂಪವನ್ನು ಬಳಕೆ ತಂದುದಾಗಿದೆ.

2. ಆಧುನಿಕ ಯುಗದಲ್ಲಿ ಈ ರೋಗಗಳೆಲ್ಲಕ್ಕೂ 'ಲಸಿಕೆ' ಗಳಿವೆ ಅಂದರೆ ಪರಿಹಾರವಿದೆ. ಗುಹ್ಯ ರೋಗಗಳಿಗೆ ಸಿದ್ಧೌಷಧವಾಗಿ 'ಪೆನ್ಸಿಲಿನ್' ಇದೆ. ಆದರೆ ಈ ಮುಗ್ಧ ಜನರಿಗೆ ಇವೆಲ್ಲಾ ದೈವಕ್ಕೆ ವಿರುದ್ಧವಾಗಿ ಉಂಟಾಗುವುವು ಮತ್ತು ನಿರಾಯಾಸ ಸಾವಿಗೆ ಗುರಿ ಪಡಿಸುವಂಥವು ಎಂದೇ ನಂಬಿಕೆ.

3. ಈ ಜನರಿಗೆ ಬರಹ ಓದು ಬಂದರೆ ಒಂದು ಪರಿಹಾರವುಂಟು. ಇದು ಸಮಾಜಕಲ್ಯಾಣದವರ ವಿಚಾರವಾಗಿದ್ದರೂ ಸಾಲದು. ಮೂಲಭೂತವಾದ ತಿಳಿವಳಿಕೆಗೆ ಈ ಮುಗ್ಧ ಜನರನ್ನು ಒಯ್ದಲ್ಲದೆ, ಅವರಲ್ಲೇ ವಿದ್ಯಾವಂತ ಯುವಕರು ಯುವತಿಯರು ಪ್ರಯತ್ನಿಸದಲ್ಲದೆ ಪರಿಹಾರವು ಸಾಧ್ಯವಾಗಲಾರದು.

4. ಇವರಿಗೆ 'ಅರಿವು' ಎಂದರೆ ತಾವು ಮಾಡುತ್ತಿರುವುದು ಕೇವಲ ನಂಬಿಕೆಯ ಪುರಾಣ'ವನ್ನು ಎಂದು ಖಚಿತ ಮಾಡಬೇಕು. ಪ್ರಜಾಪ್ರಭುತ್ವದಲ್ಲಿ ತಿಳಿದವರು - ಅರಿತವರು ದೇಶಸೇವೆಯೆಂದರೆ ಇಂಥ ಜನರ ಬದುಕನ್ನು ಹೊಸರೀತಿಯಲ್ಲಿ ಸಮಾನತೆಯ ಅಳತೆಗೋಲಿನಲ್ಲಿ ಸಾಧಿಸಬೇಕಾದುದು ಮುಖ್ಯ.

5. ಸಮಾಜ ಸೇವೆಯಲ್ಲಿ ಅಕ್ಷರಾಭ್ಯಾಸವನ್ನು ಮಾಡಿಸಿದ ಒಂದು ಬೆಳಗಾಂ ಸಂಸ್ಥೆಯು ಕೊನೆಗೆ ಒಂದು ಟಿ.ವಿ. ಪ್ರದರ್ಶನವನ್ನು ತೋರಿಸಿತ್ತು. ಅದರಲ್ಲಿ ದೇವದಾಸಿ ಮಹಿಳೆಯರು ಯುವತಿಯರು ಸೇರಿದ್ದರು. ಸಾಮಾನ್ಯವಾಗಿ ತಮಗೆ, ಬರಹವನ್ನು ಕಲಿತಿದ್ದರಿಂದ ಓದು ಬಂದದ್ದರಿಂದ ಹೊಸ ಬಗೆಯಲ್ಲಿ ಗೌರವದ ಅರಿವಾಯಿತು ಎಂದೇ ಉತ್ತರ ಬಂದಿತ್ತು. ಆದರೆ ಒಬ್ಬ ಯುವತಿ (ಸುಮಾರು 30 ಇರಬಹುದು) ತನಗೆ ಗೌರವದ ಅರಿವಾಯಿತೆಂದೂ ಸಮಾಜದಲ್ಲಿ ಗೌರವ ದೊರಕಿದ್ದರೂ ಅದು ಕಳೆದು ಹೋದಂತಾಗಿದ್ದಿತೆಂದು ಹೇಳಿಬಿಟ್ಟಳು. ಅಂದರೆ ತಾನು ದೇವದಾಸಿಯಾಗಿದ್ದಾಗಲೂ ಸಮಾಜದ ಕಣ್ಣಲ್ಲಿ ಗೌರವವಿದ್ದದ್ದು - ಸೂಚನೆಯಾಗಿತ್ತು. ಇಂಥ ಸೂಕ್ಷ್ಮ ಅರಿವಿಗೆ ಪುರುಷರು ಸಾಲದಾಗುತ್ತಾರೆ. ಸ್ತ್ರೀಯರೇ ಈ ಬಗೆಯ ಸುಧಾರಣೆಯಲ್ಲಿ ಮುಂದಾಗಬೇಕಾಗಿದೆ. ಇದರಿಂದ ಪುರುಷರಿಗೆ (ಗಂಡಂದಿರಿಗೆ ಕೂಡ) ಅರಿಯಲಾಗದಂಥ ಅಂಶಗಳು ನಿಗೂಢವಾದಂತಹವು ಬದುಕಿನಲ್ಲಿ ಉಂಟೆಂಬುದನ್ನೂ ನಮ್ಮ ಸಾಮಾಜಿಕ ರೋಗಗಳಿಗೆ ಪರಿಹಾರವು ಹೊರಬಂದು ಸುಧಾರಣೆಯಾಗಬೇಕಾದಲ್ಲಿ ಸ್ತ್ರೀಯರ ಕರ್ತವ್ಯವೆನ್ನಬಹುದಾದ ವಿಚಾರವು ಬರುತ್ತದೆ.

6. ಕೆಲವರು ಈ ಬಗೆಯ ಅಜ್ಞಾನದ ಮತ್ತು ಮುಗ್ಧ ನಡವಳಿಕೆಗಳಿಗೆ ಪರ್ಯಾಯವಾದದ್ದೇನು? ಹೇಳಿರಿ ಎಂದರೆ? ನಿಷ್ಠುರವಾಗಿ ಜರುಗುವ ಆಚರಣೆಗಳನ್ನು ಕೇವಲ ಸಂಕೇತ ರೂಪಕ್ಕೆ ಇಳಿಸಿ ಕ್ರಮೇಣ ಅದನ್ನೂ ವಿದ್ಯಾವಂತಿಕೆಯಿಂದ ದೂರ ಮಾಡುವ ಕ್ರಮವು ನಮ್ಮ ಸ್ತ್ರೀ ವಿದ್ಯಾಭ್ಯಾಸದಲ್ಲಿ ಬರುವಲ್ಲಿ ಪ್ರಗತಿಯಾದೀತು!

7. ದೇವದಾಸಿ ಪದ್ಧತಿಯು ನೀತಿಯುತವಾದುದೂ ಅಲ್ಲದೆ ದಿವ್ಯವಾದುದೆಂದು ನಂಬುವವರಿರಬಹುದು. ಆದುದರಿಂದ ಹಣವಂತ, ಬಲಿಷ್ಠ ವರ್ಗವು ನಡೆಸುತ್ತಿರುವ ಶೋಷಣೆಗೆ ಪರಿಹಾರವೆಂದರೆ ಈ ಪದ್ಧತಿಯನ್ನೇ ಬಿಡಬೇಕಾಗುತ್ತದೆ. ಸಮಾನತೆಯನ್ನು ಕೇವಲ ತೋರಾಣಿಕೆಗೂ ಮೇಲುವರ್ಗದ ರಕ್ಷಣೆಗಾಗಿಯೂ ಬಳಸುವುದು ಪ್ರಜಾಪ್ರಭುತ್ವದಲ್ಲಿ ಹೇಯಕರವಾದ ರೀತಿನೀತಿಯಾಗುತ್ತದೆ.

- ಕ.ವೆಂ. ರಾಜಗೋಪಾಲ್

ಚಂದ್ರಗುತ್ತಿ

- ಬಿದರಹಳ್ಳಿ ನರಸಿಂಹಮೂರ್ತಿ

ಹೆಣ್ಣಾಗಿ ಹೆಣ್ಣೀಗಿ ಮುಳ್ಳಾದಿಯಲ್ಲವ್ವಾ
ಕಳ್ಳೂ ಬಳ್ಳಿಗಳನ್ನೆ ಕುಡಿಚೂಟಿ ಕೊಂದಿ
ಕಣ್ಣಾ ಎಂಜಲದಾಗೆ ಎಣಿಗಾಯಿ ಕುಚ್ಚೀದಿ
ಹೆಣ್ಣಾ ಹೆಂಗಸು ಯಾಕೆ ತಣ್ಣಾಗೆ ಕಲ್ಲಾದಿ

ತಿಂಗಳು ತಿಂಗಳಿನ ಬೆಳಕುಳ್ಳ ಬಾಲೇರು
ಉಡುತಾರೆ ಕತ್ತಲ ಹರಕೀಯ ಹತ್ತಲ
ಹುಣ್ಣಾ ಹುಣ್ಣಾವೀಗಿ ಚಂದ್ರಮನ ಕುತ್ತೀಗಿ
ಕೊಯುತೈತಿ ಗುತ್ತಿ ನಗುತೈತಿ ಕತ್ತೆತ್ತಿ

ಹೂವಿನ ಜೀವದ ಕೂಸಿನ ತಾಯೇರು
ಮಾನದ ಪದಕಾವ ಧರಿಸೀದ ಗರತೇರು
ಉಡಿ ಉಗುಚಿ ಮುಡಿ ಬಿಚ್ಚಿ ಓಡೂವ ದೌಡೀಗೆ
ಹೌಹಾರಿ ನಿಂತಾವೆ ಎಸಳಾಗಣ್ಣುಗಳು

ಭೀತಿಯ ನೆಡುವಂಥ ಅಮಲಿನ ಅಜ್ಜೀರು
ಮುದಿಯ ಬೆಂಗಾವಲು ಹರಯ ಹರಾಜಿಗೆ
ತುಳಿಯುವ ಬೆಂಕೀಗೆ ಕುದಿಯಾವ ಹಾಲಿಗೆ
ಹುಳಿ ಹಿಂಡಿ ಕೊಡುತಾರೆ ಹಾದರದಾ ಕೇರೀಗೆ

ಒಡಲ ರಸವೆಂಬೋದೆ ವರದಾನದಿಯಾಗಿ
ಜೇವಾಫಲ ನೀಡೂವ ಮಲೆನಾಡ ನೆಲವಾಗಿ
ಅರಳೀದ ಬದುಕನೆ ನುಂಗೂವ ಬಾಯಾಗಿ
ನಿನ ಕದವೆ ನಿನ ಕುಲದಾ ಸಿದಿಗೀಯಾತವ್ವಾ

ಸ್ತ್ರೀಪರ ಕಾಳಜಿಯ ಮಂಗಳಾ

ಬ್ಯಾಂಕಿನ ಕೆಲಸದಲ್ಲಿ ಮಗ್ನಳಾಗಿದ್ದಾಗ ಬಂತೊಂದು ಫೋನು ಕರೆ. ಏನೋ ಕೆಲಸದ ಒತ್ತಡದಲ್ಲಿದ್ದ ನಾನು ಫೋನ್ ಎತ್ತಿಕೊಂಡು 'ಹಲೋ' ಎಂದಾಗ ಆ ಕಡೆಯಿಂದ ಬಂದ ಧ್ವನಿ 'ನಾನು ಮಂಗಳಾ ಮಾತಾಡ್ತಿರೋದು' ಎಂದು ಕೇಳಿಸಿತು. ಹಲವಾರು ಮಂಗಳಾಗಳ ಪರಿಚಿತರಿರುವ ನನಗೆ ಇದ್ಯಾರೆಂದು ಗೊತ್ತಾಗಲಿಲ್ಲ. 'ಯಾವ ಮಂಗಳಾ?' ಎಂದೆ. ನಾನಮ್ಮ 'ಸಿ.ಎನ್.ಮಂಗಳಾ' ಎಂದರು. ಅದು ಸರಿಯಾಗಿ ಕೇಳಿಸದಿದ್ದಕ್ಕೂ, ಅಥವಾ ಅದು ನನಗೆ ಪರಿಚಿತವಲ್ಲದ ಹೆಸರಾದದ್ದಕ್ಕೋ ನನಗೆ ಗೊತ್ತಿರುವ ಎಲ್ಲ ಹೆಸರೂ ಹೇಳಿ ಮುಗಿಸಿದೆ. ಆಗ ಅವರು ಮತ್ತೊಮ್ಮೆ 'ನಾನು ಸಿ.ಎನ್. ಮಂಗಳಾ ಮಾತಾಡ್ತಿರೋದು' ಎಂದಿರಬೇಕು. ಸಹನೆಯಿಲ್ಲದ ನಾನು 'ಯಾವ ಮಂಗಳಾದ್ರೂ ಆಗಲಿ, ನಿಮಗೇನು ಬೇಕು? ಹೇಳಿ' ಎಂದೆ ಕೂಡಲೆ ನನ್ನ ಮಾತಿನ ಧಾಟಿ ಕೇಳಿ ಅವರು 'ನಾನು ಎನ್.ಎಮ್.ಕೆ.ಆರ್.ವಿ. ಕಾಲೇಜಿನ ಏಕ್ಸ್‌ಪ್ರಿನ್ಸಿಪಾಲ್ ಮಂಗಳಾ ಮಾತಾಡ್ತಿರೋದು' ಎಂದು ಹೇಳಿದಾಗ ನನಗೆ ತುಂಬಾ ನಾಚಿಕೆಯಾಯಿತು. ತಕ್ಷಣ ಗುರುತಿಸಿ, 'ಸಾರಿ ಮೇಡಂ ನನಗೆ ಗೊತ್ತಾಗಲಿಲ್ಲ, ನೀವು ಚಿ.ನ. ಮಂಗಳ ಎಂದಷ್ಟೇ ಹೇಳಿದ್ದರೆ ಸಾಕಿತ್ತು, ಗೊತ್ತಾಗುತ್ತಿತ್ತು' ಎಂದು ಹೇಳಿ ಅವರನ್ನು ವಿಚಾರಿಸಿಕೊಂಡೆ. ನನ್ನ ಲೋಪವೇನೇ ಇರಲಿ, 'ಚಿ.ನ.ಮಂಗಳ' ಮತ್ತು ಅವರು ಕಟ್ಟಿ ಬೆಳೆಸಿದ 'ಶಾಶ್ವತಿ' ಸಂಸ್ಥೆ ಕರ್ನಾಟಕದಲ್ಲಿ ಅತಿ ಪರಿಚಿತವಾದ ಹೆಸರು. ಅಷ್ಟೇ ಅಲ್ಲ ರಾಷ್ಟ್ರೀಯ ಖ್ಯಾತಿಯನ್ನೂ ತನ್ನ ಬಗಲಿಗೆಳೆದುಕೊಂಡ ಹೆಸರುಗಳು. ನಾನು ಮತ್ತು ಸುಮಿತ್ರಾ ಕಲ್ಕತ್ತೆಯ ಜಾದವಪುರ ವಿಶ್ವವಿದ್ಯಾಲಯಕ್ಕೆ ಭೇಟಿಕೊಟ್ಟಾಗ ಕನ್ನಡದವರಾದ ನಮ್ಮನ್ನು ಅವರು ಕೇಳಿದ ಮೊದಲ ಪ್ರಶ್ನೆ, 'ಮಂಗಳಾ ಗೊತ್ತಾ?'

ಹೆಣ್ಣುಮಕ್ಕಳ ಶಿಕ್ಷಣ, ಅಧ್ಯಯನ, ಸಂಶೋಧನೆ ಮತ್ತು ಅಭ್ಯುದಯದ ಬಗ್ಗೆ ಅಪಾರ ಆಸ್ಥೆ ಮತ್ತು ಕಾಳಜಿಯಿದ್ದ ಚಿ.ನ. ಮಂಗಳಾ ಅವರ ಸಾಧನೆಯ ಪಟ್ಟಿಯನ್ನು, ಬರಹಗಾರ್ತಿಯಾಗಿ ಅವರು ರಚಿಸಿರುವ ಕೃತಿಗಳನ್ನು ಇಲ್ಲಿ ಪಟ್ಟಿ ಮಾಡುತ್ತಿಲ್ಲ. ಮಹಿಳಾ ಚಳುವಳಿಯಲ್ಲಿ ನಂಬಿಕೆಯಿಟ್ಟಿರುವ ನಮ್ಮಂಥವರಿಗೆ ಮಂಗಳಾರವರ ಬದುಕು ಮತ್ತು ನಂಬಿಕೆಗಳು ಯಾವ ರೀತಿಯಲ್ಲಿ ಮುಖ್ಯವಾಗ ಬಲ್ಲವು ಎಂದು ಹೇಳುವುದರೊಂದಿಗೆ ಮಂಗಳಾ ನಮ್ಮೊಂದಿಗೆ ಹೊಂದಿದ್ದ ಸಂಬಂಧದ ಕೆಲವು ಮಧುರಕ್ಷಣಗಳನ್ನು ನೆನಪಿಸಿ ಕೊಳ್ಳುವುದು ನಾವು ಅವರಿಗೆ ಅರ್ಪಿಸುವ ಶ್ರದ್ಧಾಂಜಲಿ ಆದೀತು.

ಇತ್ತೀಚೆಗೆ ಅವರು ನಿವೃತ್ತರಾದ ನಂತರ ಕೆಲವೊಮ್ಮೆ ಫೋನ್‌ಮಾಡಿ ಮಾತಾಡಿದ್ದರು. ಅವರಿಗೆ ಅಧ್ಯಯನಕ್ಕೆ ಬೇಕಾದ ಕೆಲವು ಪುಸ್ತಕಗಳ ಬಗ್ಗೆ ಕೇಳುವುದರ ಜೊತೆಗೆ 'ಅಚಲ' ಪತ್ರಿಕೆಯ ಬಗ್ಗೆ ಮೆಚ್ಚುಗೆಯ ಪ್ರೋತ್ಸಾಹದ ಮಾತುಗಳನ್ನಾಡುತ್ತಿದ್ದರು. ಎಲ್ಲಕ್ಕಿಂತ ಮುಖ್ಯವಾಗಿ ಪತ್ರಿಕೆಯನ್ನು ಸಂಪೂರ್ಣವಾಗಿ ಓದಿ ತಮ್ಮ ವಿಮರ್ಶೆಯನ್ನು ತಿಳಿಸುತ್ತಿದ್ದರು: ''ಸುಮಿತ್ರಾರವರ ಜಾನಪದ ಲೇಖನ ಚೆನ್ನಾಗಿದೆ. ಸೌಂದರ್ಯಸ್ಪರ್ಧೆಯನ್ನು ಕುರಿತ ಅಚಲ ಸಂಪಾದಕೀಯ ನಿಜವಾಗಲೂ ತುಂಬ ಚೆನ್ನಾಗಿದೆ'' ಎಂದೆಲ್ಲಾ ಹೇಳಿ ಬೆನ್ನು ತಟ್ಟಿದ್ದರು.

ಅಚಲ ಮತ್ತು ಜಾಗೃತಿಯನ್ನು ಹತ್ತಿರದಿಂದ ಆತ್ಮೀಯವಾಗಿ ಕಂಡ ಮಂಗಳ ನಮ್ಮ ಹಿತಚಿಂತಕರಲ್ಲಿ ಒಬ್ಬರಾಗಿದ್ದರು. ಹನ್ನೊಂದು ವರ್ಷಗಳ ಹಿಂದೆ 'ಅಚಲ' ಬಿಡುಗಡೆಯ ಸಮಾರಂಭದ ದಿನ ಇನ್ನೂ ನೆನಪು ಹಸಿರಾಗಿದೆ. ಹತ್ತು ಗಂಟೆಯ ಕಾರ್ಯಕ್ರಮಕ್ಕೆ ಮುಂಚಿತ ವಾಗಿಯೇ ಆಗಮಿಸಿ ಬಂದು ಇಡೀ ಕಾರ್ಯಕ್ರಮ ದೊಂದಿಗೆ ಇದ್ದು ಹೋಗಿದ್ದರು. ಅವರ 'ತಿರುಮಲಾಂಬ ಸಭಾಂಗಣ'ದಲ್ಲಿ ನಾವು ತ್ರಿವೇಣಿಯವರ ನೆನಪಿನ ವಿಚಾರ ಸಂಕಿರಣವನ್ನು ನಡೆಸಲು ಅನುವು ಮಾಡಿಕೊಟ್ಟಿದ್ದರು.

ಚಿ.ನ. ಮಂಗಳಾ ಎಂದೊಡನೆ ನನ್ನ ಕಣ್ಣ ಮುಂದೆ ಬರುವ ಅಂಶಗಳು ಎರಡೇ. ಒಂದು ಅವರ ಛಲ ಮತ್ತು ದಕ್ಷತೆ; ಮತ್ತೊಂದು ಅವರ ಸರಳ ವ್ಯಕ್ತಿತ್ವ. ಅವರ ಕಾಲೇಜಿನ ಆವರಣದೊಳಗೆ ಕಾಲಿಟ್ಟೊಡನೆ ಸ್ವಾಗತಿಸುವ ನಳನಳಿಸುವ ಹಸಿರಿನ ಜೊತೆಗೆ ಇಡೀ ಕಾಲೇಜು ಚಟುವಟಿಕೆಯ ಕೇಂದ್ರವಾಗಿದ್ದರೆ ಅದರ ಹಿಂದೆ ಮಂಗಳಾ ಅವರ ಪರಿಶ್ರಮವನ್ನು ಕಾಣಬಹುದಾಗಿತ್ತು. ಅವರು ನಡೆಸುತ್ತಿದ್ದ ಸಮಾರಂಭಗಳು ಚಿಕ್ಕವಾಗಿರಲಿ ಇಲ್ಲವೇ ದೊಡ್ಡವಾಗಿರಲಿ ಅದರ ಅಚ್ಚುಕಟ್ಟು ಮತ್ತು ದಕ್ಷತೆ ಮಂಗಳಾ ಅವರ ವೈಯಕ್ತಿಕ ಪ್ರತಿಭೆ ಮತ್ತು ಸಂಘಟನಾ ಸಾಮರ್ಥ್ಯದ ಸೂಚಕವಾಗಿರುತ್ತಿತ್ತು. ಇಡೀ ಕಾಲೇಜನ್ನು ಕುಟುಂಬದಂತೆ ನಡೆಸಿಕೊಂಡು ಪ್ರಿನ್ಸಿಪಾಲ್ ಹುದ್ದೆಗೆ ಗೌರವ ತುಂಬಿದ್ದು ಮಂಗಳಾ ಅವರ ವ್ಯಕ್ತಿ ವೈಶಿಷ್ಟ್ಯ. ತನ್ನ ಮನದಲ್ಲಿ ಮೂಡಿದ ವಿಚಾರಗಳನ್ನು ತತ್‌ಕ್ಷಣವೇ ಕಾರ್ಯರೂಪಕ್ಕಿಳಿಸಿದ ದಕ್ಷೆ ಮಂಗಳ ಆಗಿದ್ದರು.

ಅವರುಡುತ್ತಿದ್ದ ಬಿಳಿ ಶುಭ್ರ ಸೀರೆಯಷ್ಟೇ ಅವರ ಬದುಕು ಸರಳವಾಗಿತ್ತು. ಅವರೊಡನೆ ಯಾರಾದರೂ ಸಲೀಸಾಗಿ ಸಂಪರ್ಕಿಸಿ ಮಾತನಾಡಬಹುದಿತ್ತು. ಮಂಗಳಾ ಅವರ ಸರಳತೆಯನ್ನು ನೆನಪಿಸಿಕೊಂಡಾಗ ಘಟನೆಯೊಂದು ನೆನಪಿಗೆ ಬರುತ್ತದೆ. ನಾಲ್ಕೈದು

ವರ್ಷಗಳ ಹಿಂದಿನ ಮಾತು. ಧಾರವಾಡದಲ್ಲಿ ನಡೆಯಲಿದ್ದ ಕಾರ್ಯಕ್ರಮಕ್ಕೆ ನಾವು ಕೆಲವು ಮಂದಿ ಬೆಂಗಳೂರಿನಿಂದ ಪ್ರಯಾಣ ಮಾಡುತ್ತಿದ್ದೆವು. ಮಂಗಳಾ ಕೂಡ ನಮ್ಮೊಡನಿದ್ದರು. ನಮ್ಮೊಡನೆ 'ಗಣ್ಯ' ಮಹಿಳೆಯೊಬ್ಬರು ಪ್ರಯಾಣಿಸುತ್ತಿದ್ದರು. ಅವರು ಮೊದಲನೆಯ ವರ್ಗದ ಬೋಗಿಯಲ್ಲಿದ್ದರೂ ಅವರೊಡನೆ ಬಂದ ಅವರ ಗೆಳತಿ (ಸಹಾಯಕಿಯೋ!) ನಮ್ಮೊಡನೆ ಎರಡನೆ ವರ್ಗದಲ್ಲಿದ್ದರು. ಧಾರವಾಡ ತಲುಪಿ ಇಳಿಯುವಾಗ ಮಂಗಳಾವರ ಕೈಯಲ್ಲಿ ಚಿಕ್ಕ ಚಿಕ್ಕ ಎರಡು ಮೂರು ಚೀಲಗಳಾಗಿದ್ದವು. ಇಳಿದೊಡನೆ ಅವರ ಬ್ಯಾಗೊಂದನ್ನು ಕೊಡಿ ಹಿಡಿದುಕೊಳ್ಳುವೆ' ಎಂದೆ. ಅವರಿಗೆ ಕಷ್ಟವಾಗುತ್ತಿದ್ದರೂ ಸ್ವಾಭಿಮಾನಿಯಾದ ಮಂಗಳಾ 'ಪರವಾಗಿಲ್ಲ, ನಾನೇ ತರುವೆ' ಎಂದು ಹೇಳಿ ಅವರ ಚೀಲಗಳನ್ನು ನನಗೆ ಕೊಡಲು ನಿರಾಕರಿಸಿದರು. ಆದರೆ ನಮ್ಮೊಡನೆ ಬಂದಿದ್ದ 'ಗಣ್ಯ'ಮಹಿಳೆ ತನ್ನ ಎಲ್ಲ ಹೊರೆಯನ್ನೂ ತನ್ನ ಸಹಾಯಕಿಗೆ ಅಂಟಿಸಿ ಸೇವೆ ಮಾಡಿಸಿಕೊಳ್ಳುತ್ತಿದ್ದ ರೀತಿ ನಿಜಕ್ಕೂ ನಾಚಿಕೆಗೇಡಿನದಾಗಿತ್ತು. ಮಂಗಳಾ ಅವರ ಈ ಸರಳತೆ ಈಗಲೂ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದೆ.

ಕಳೆದ ಎರಡು ದಶಕಗಳಿಂದ ವ್ಯಾಪಕವಾಗಿ ಬೆಳೆಯುತ್ತಿರುವ ಮಹಿಳಾ ಅಧ್ಯಯನ, ಸಂಶೋಧನೆ ಮತ್ತು ಚಳುವಳಿಯ ಹಿನ್ನೆಲೆಯಲ್ಲಿ ಚಿ.ನ. ಮಂಗಳಾ ಒಂದು ದೊಡ್ಡ ಹೆಸರಾಗಿದ್ದಾರೆ. ಅವರಿಗೇ ವಿಶಿಷ್ಟವಾದ ಆರ್ಷೇಯ ನಂಬಿಕೆಗಳು, ವಿಚಾರಗಳ ಬಗ್ಗೆ ನಾವು ತಕರಾರು ಎತ್ತಬಹುದಾದರೂ, ಮಂಗಳಾ ಅವರ ಸರಳತೆ, ದಕ್ಷತೆ ಮತ್ತು ಸ್ನೇಹಪರತೆ ಎಲ್ಲರೂ ಮೆಚ್ಚುವ ಅಂಶಗಳಾಗಿವೆ.

ಮೇ 31ರಂದು ಮಂಗಳಾ ಅವರ ಕೊನೆಯ ಭೇಟಿ ಮಾಡಲೆಂದು ಅವರ ಮನೆಗೆ ಹೋದಾಗ ಕಂಡದ್ದು ಮಂಗಳ ಅವರ ಎಂದಿನ ಶಾಂತ ಮುಖಮುದ್ರೆ. ಅಲ್ಲಿ ಕಂಡು ಬಂದ ಅವರ ಕಾಲೇಜಿನ ವಿಶೇಷವಾಗಿ ಮಹಿಳಾ ವೃಂದ, ಮಂಗಳಾ ಹೆಣ್ಣು ಮಕ್ಕಳಿಗೆ ಏನು ಕೊಟ್ಟರು ಎಂಬುದಕ್ಕೆ ನಿದರ್ಶನವಾಗಿದ್ದರು. ತಮ್ಮ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬರಿಗೂ ಹಿರಿಯ ಅಕ್ಕನಾಗಿ ಮಮತೆ, ವಿಶ್ವಾಸ, ಸಾಂತ್ವನಗಳನ್ನು ನೀಡಿದ ಮಂಗಳಾ ಅವರ ಸಾವಿನ ವಿಷಾದ ಛಾಯೆ ಅಲ್ಲಿ ಆವರಿಸಿತ್ತು. ಕಾಲೇಜಿನ ಸಹೋದ್ಯೋಗಿಗಳಿಗೆ ಅವರ ಕುಟುಂಬದ ಮಂದಿಯೂ ನೀಡದ ನೈತಿಕ ಬೆಂಬಲ ಮತ್ತು ಸಹಕಾರಗಳನ್ನು ನೀಡಿದ ಮಂಗಳಾ 'ಸೋದರಿತ್ವ'ದ ಭಾವಕ್ಕೆ ಆದರ್ಶವಾಗಿದ್ದರು.

-ಎನ್. ಗಾಯತ್ರಿ

ಕಂಬನಿ

★ ಇತ್ತೀಚೆಗೆ ನಿಧನರಾದ ಪ್ರಸಿದ್ಧ ಲೇಖಕಿ, ಶಿಕ್ಷಣ ತಜ್ಞೆ ಶ್ರೀಮತಿ ಚಿ.ನ. ಮಂಗಳಾ ಅವರಿಗಾಗಿ 'ಅಚಲ'ದ ಬಳಗವು ಸಂತಾಪ ಸೂಚಿಸುತ್ತದೆ.

★ **ಶ್ರೀಮತಿ ಚಂದ್ರಭಾಗಾದೇವಿ** - ಪ್ರಸಿದ್ಧ ನೃತ್ಯಗಾತಿ, ನೃತ್ಯಪಟು ಡಾ|| ಯು.ಎಸ್. ಕೃಷ್ಣರಾವ್‌ರವರ ಪತ್ನಿ. ತಮ್ಮ 70ನೇ ವಯಸ್ಸಿನಲ್ಲಿ ತೀರಿಕೊಂಡರು.

★ **ಶ್ರೀಮತಿ ರೇಣುಕಾ ರಾಯ್** - ಸ್ವಾತಂತ್ರ್ಯ ಹೋರಾಟಗಾರ್ತಿ, ಏಪ್ರಿಲ್ 11ರಂದು ನಿಧನರಾದರು. ಗಾಂಧೀಜಿಯವರೊಡನೆಯೂ ಇದ್ದ ಈಕೆ ಸಾಮಾಜಿಕ ಕಾರ್ಯಕರ್ತೆಯಾಗಿದ್ದವರು. 'ಆಲ್ ಇಂಡಿಯಾ ವಿಮೆನ್ಸ್ ಕಾನ್‌ಫರೆನ್ಸ್'ನ ಅಧ್ಯಕ್ಷೆಯೂ ಆಗಿದ್ದರು. 1920ರಲ್ಲಿ ಗಾಂಧೀಜಿಯವರ ಅಸಹಕಾರ ಚಳುವಳಿಯ ಕರೆಗೆ ಓಗೊಟ್ಟಿದ್ದರು.

ಇವರುಗಳ ನಿಧನಕ್ಕೆ ಅಚಲಾ ಸಂತಾಪ ಸೂಚಿಸುತ್ತದೆ.

ಜಾಗತೀಕರಣ ಮತ್ತು ಮಹಿಳೆ

'ಜಾಗತೀಕರಣ' - ಹಾಗೆಂದರೇನು?

ನಮ್ಮ ದೇಶ ಅನುಸರಿಸುತ್ತಿರುವ ಆರ್ಥಿಕ ನೀತಿಗಳು ಜಾಗತೀಕರಣದ ಉದಾಹರಣೆಗಳು. 'ಇಡೀ ಪ್ರಪಂಚವೇ ಒಂದು ಹಳ್ಳಿಯಂತೆ' ಎಂದು ಮುಂದುವರೆದ ರಾಷ್ಟ್ರಗಳು ಸಾರಿವೆ. ಅದರ ಅಂಗವಾಗಿಯೇ SAP (Structural Adjustment Programmes) IMF ಮತ್ತು ವಿಶ್ವಬ್ಯಾಂಕಿನ ನೀತಿಗಳು, ಗ್ಯಾಟ್ ಒಪ್ಪಂದ - ಎಲ್ಲವೂ ಬರುತ್ತವೆ.

ಇಂತಹ policyಗಳಿಂದ ಲ್ಯಾಟಿನ್ ಅಮೇರಿಕಾ ಮತ್ತು ಆಫ್ರಿಕಾಗಳಲ್ಲಿ ದುಷ್ಪರಿಣಾಮಗಳಾಗಿದ್ದರೂ ಕೂಡ, ಭಾರತದಂತಹ ದೇಶದ ಮೇಲೆ ಅವುಗಳನ್ನು ಹೇರಲಾಗುತ್ತಿದೆ.

ಬಡತನ, ಆಹಾರ ಧಾನ್ಯಗಳ ಕೊರತೆ, ಹಣದುಬ್ಬರ, ಸಾಲದ ಏರಿಕೆ, ಉತ್ಪಾದನೆಯಲ್ಲಿ ಕಡಿತ- ಇವು ಜಾಗತೀಕರಣದ ದುಷ್ಪರಿಣಾಮಗಳು.

ಭಾರತ ಸರ್ಕಾರ, ತಾನು ಕೃಷಿ ಪ್ರಧಾನ ದೇಶ ಎಂಬ ಹಿನ್ನೆಲೆಯಲ್ಲಿ ಮೇಲೆ ಹೇಳಿದ ಎಲ್ಲ policy ಗಳನ್ನೂ ವಿಮರ್ಶಾತ್ಮಕ ದೃಷ್ಟಿಯಲ್ಲಿ ನೋಡಬೇಕಾಗಿದೆ. ತಾನಿರುವ ಸ್ಥಿತಿಯನ್ನು ದೈವದತ್ತ ಅಂದುಕೊಳ್ಳದೆ ಸಮಗ್ರ ಬದಲಾವಣೆಯ, ಅಭಿವೃದ್ಧಿಯ ದೃಷ್ಟಿಯಿಂದ ಪರಿಶೀಲಿಸಿಕೊಳ್ಳಬೇಕಾಗಿದೆ.

IMF, World Bank, World Trade Organisation ನ ನಿಯಮಾವಳಿಗಳು ಮುಂದುವರೆದ ರಾಷ್ಟ್ರಗಳ ಆರ್ಥಿಕ ಸಂಕಷ್ಟಗಳನ್ನು ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರದ ಮೇಲೆ ಹೇರುವ ಪ್ರಯತ್ನ ಅನ್ನುವುದನ್ನು ನಮ್ಮ ದೇಶ ಅರಿತುಕೊಳ್ಳಬೇಕಾಗಿದೆ.

ಈ ಎಲ್ಲಾ policyಗಳನ್ನೂ ವಿಮರ್ಶಾತ್ಮಕ ದೃಷ್ಟಿಯಲ್ಲಿ ನೋಡಬೇಕಾಗಿದೆ. ತಾನಿರುವ ಸ್ಥಿತಿಯನ್ನು ದೈವದತ್ತ ಅಂದುಕೊಳ್ಳದೆ ಸಮಗ್ರ ಬದಲಾವಣೆಯ, ಅಭಿವೃದ್ಧಿಯ ದೃಷ್ಟಿಯಿಂದ ಪರಿಶೀಲಿಸಿಕೊಳ್ಳಬೇಕಾಗಿದೆ.

IMF, World Bank, World Trade Organisation ನ ನಿಯಮಾವಳಿಗಳು ಮುಂದುವರೆದ ರಾಷ್ಟ್ರಗಳ ಆರ್ಥಿಕ ಸಂಕಷ್ಟಗಳನ್ನು ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರದ ಮೇಲೆ ಹೇರುವ ಪ್ರಯತ್ನ ಅನ್ನುವುದನ್ನು ನಮ್ಮ ದೇಶ ಅರಿತುಕೊಳ್ಳಬೇಕಾಗಿದೆ.

ಈ ಎಲ್ಲಾ policy ಗಳಿಂದ ಮಹಿಳೆಯರ ಜೀವನ ಮಟ್ಟದ ಮೇಲೆ ಹೆಚ್ಚಿನ ದುಷ್ಪರಿಣಾಮಗಳಾಗಿವೆ ಎಂಬುದರಲ್ಲಿ ಸಂಶಯವಿಲ್ಲ.

ಉದಾರೀಕರಣದ ನೀತಿಯಿಂದ ಯಾವ ಪರದೇಶವೂ ನಮ್ಮ ದೇಶದಲ್ಲಿ ಬಂಡವಾಳ ತೊಡಗಿಸಬಹುದಾಗಿದೆ. ಹೀಗೆ ಬಂಡವಾಳ ತೊಡಗಿಸಿದಾಗ, ಅತ್ಯಂತ ಕಡಿಮೆ ಕೂಲಿಗೆ, ಅಥವಾ ಸಂಬಳಕ್ಕೆ ನಮ್ಮ ದೇಶದ ಮಹಿಳೆಯರನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ.

ಈ ನೀತಿಯಲ್ಲಿ ರಫ್ತಿನ ಮೇಲೆ ಹೆಚ್ಚಿನ ಒತ್ತು ಇರುವುದರಿಂದ ನಮ್ಮ ದೇಶದ ಜನರಿಗೆ ಉತ್ಪಾದಿತ ವಸ್ತುಗಳು ಸಿಗುವುದರಲ್ಲಿ ತೊಂದರೆಯಾಗುವ ಸಂಭವವಿದೆ. ನಮ್ಮ ದೇಶದ ದುಡಿಯುವ ವರ್ಗದ ಆದಾಯ ಕಡಿಮೆಯಾಗುವ ಸಂಭವವಿದೆ. ಇದರಲ್ಲಿ ಬಹುಮಟ್ಟಿಗೆ ಹೆಂಗಸರೂ ಸೇರಿರುವುದು ನಿಜ.

ಈ ನೀತಿಯ ಪ್ರಕಾರ ಮಕ್ಕಳ ಆರೋಗ್ಯ, ವಿದ್ಯಾಭ್ಯಾಸ, ಹೆಂಗಸರ ಅಭಿವೃದ್ಧಿ ಮುಂತಾದವುಗಳಿಗೆ ಅನುದಾನ ನೀಡುವಂತಿಲ್ಲ. ಹೀಗೆ, ಅನುದಾನದಲ್ಲಿ ಕಡಿತ ಉಂಟಾದಾಗ ಇದು ನೇರವಾಗಿ ಮಹಿಳೆಯರ ಅಭಿವೃದ್ಧಿಗೇ ಮಾರಕವಾಗುತ್ತಿದೆ.

ಒಟ್ಟಿನಲ್ಲಿ ಹೇಳುವುದಾದರೆ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ -ಯಾವುದೇ ರೀತಿಯಲ್ಲೂ ಈ 'ಜಾಗತೀಕರಣ'ದ ನೀತಿಯು ವಿನಾಶಕಾರಿಯಾದದ್ದು. ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ಆರ್ಥಿಕ ಸಂಪನ್ಮೂಲಗಳಿರುತ್ತವೆ. ತನ್ನದೇ ಆದ ಉತ್ಪಾದನಾ ವಿಧಾನಗಳಿರುತ್ತವೆ, ತನ್ನದೇ ಆದ ಸಂಸ್ಕೃತಿಯಿರುತ್ತದೆ. ಆದ್ದರಿಂದ, ಮುಂದುವರೆದ ರಾಷ್ಟ್ರಗಳಿಂದ ಹೇರಿದ ನೀತಿಗಳನ್ನು ಸ್ವೀಕರಿಸುವಾಗ ವಿಮರ್ಶಾತ್ಮಕ ಧೋರಣೆ ತಳೆಯಬೇಕಾಗುತ್ತದೆ. ಅದರಲ್ಲಿಯೂ ಇಂದಿನ ಯುವ ಜನಾಂಗದ ಮೇಲೆ, ಎಳೆಯರ ಮೇಲೆ ಟಿ.ವಿ. ಚಾನೆಲ್‌ಗಳು ಮಾಂತ್ರಿಕ ಪ್ರಭಾವ ಬೀರುತ್ತಿದ್ದು, ಇದರ ಒಳಸುಳಿಯು ತರಬಹುದಾದ ಸಂಸ್ಕೃತಿನಾಶದತ್ತ ಜನರು ನಿರ್ಲಕ್ಷ್ಯ ತೋರುತ್ತಿದ್ದಾರೆ. ಈ ಕುರುಡುತನಕ್ಕೆ ಒಂದು ನಿದರ್ಶನ :

ರಾಜ್ಯಸಭೆಯ ಉಪಸಭಾಧ್ಯಕ್ಷೆ, ರೂಪರ್ಟ್ ಮಾರ್ಡೋಕ್ ಅವರಿಗೆ ಆಹ್ವಾನ ನೀಡುತ್ತ- (ಚಹಾಕೂಟದಲ್ಲಿ ಹೇಳಿದ ಮಾತು)

"ಭಾರತದ ಮೂಲೆ ಮೂಲೆಯನ್ನು ಮುಟ್ಟಲು ನಮಗೆ ನಿಮ್ಮ ತಂತ್ರಜ್ಞಾನ ಬೇಕು. ನಮಗೆ ನಮ್ಮ ಸಂಸ್ಕೃತಿ ನಾಶವಾಗುತ್ತದೆ ಎಂಬ ಭಯವಿಲ್ಲ. ನಮ್ಮ ಸಂಸ್ಕೃತಿ ಎಷ್ಟು ಆಳವಾಗಿ ಬೇರುಬಿಟ್ಟಿದೆಯೆಂದರೆ ಅದು ಆಕಾಶದ ಅಲೆಗಳಿಂದ ಕೊಚ್ಚಿಹೋಗುವುದಿಲ್ಲ. ಬ್ರಿಟಿಷರು 200 ವರ್ಷ ಆಳಿದರೂ ಸಹ ನಾವು ನಮ್ಮ ಸಂಸ್ಕೃತಿಯನ್ನು ಕಳೆದುಕೊಂಡಿಲ್ಲ" ಎನ್ನುತ್ತಾರೆ.

ಎಲ್ಲಾ ಸ್ಯಾಟಲೈಟ್‌ಗಳಿಗೆ, ಟಿ.ವಿ. ಚಾನಲ್‌ಗಳಿಗೆ ಭಾರತವೇ ಮುಖ್ಯವಾಗಿರುವುದಾದರೂ ಏಕೆ? ಚೋಮ್‌ಸ್ಕಿ ಪ್ರಕಾರ :

"ಅಮೆರಿಕಾ ಗುಣಕ್ಕೆ ಹೆದರುತ್ತದೆಯೇ ಹೊರತು ದುರ್ಗುಣಕ್ಕಲ್ಲ. ಒಮ್ಮೆ ಅಲಿಪ್ತ ಚಳುವಳಿಯ ಸಮರ್ಥ ನಾಯಕನಾಗಿದ್ದ, ಮೂರನೇ ವಿಶ್ವವನ್ನು ಅತ್ಯುತ್ತಮವಾಗಿ ಪ್ರತಿನಿಧಿಸಿದ್ದ, ದಕ್ಷಿಣ ಆಫ್ರಿಕಾದಲ್ಲಿ ನೆಲ್ಸನ್ ಮಂಡೇಲಾ ಪರವಾಗಿ ವರ್ಣದ್ವೇಷದ ವಿರುದ್ಧ ಜಾಗತಿಕ ಅಭಿಪ್ರಾಯ ಮೂಡಿಸಿದ್ದ, ಚಿಲಿಯ ಕ್ಯಾಸ್ಟ್ರೊ ಸರಕಾರಕ್ಕೆ ಸಹಾಯಹಸ್ತ ಚಾಚಿದ್ದ ಭಾರತದ 'ಗುಣ'ದ ಬಗ್ಗೆ ಅಮೆರಿಕಾ ಈ ಮೊದಲಿನಿಂದಲೂ ಕಣ್ಣಿಟ್ಟಿದೆ. ಈ ಕಾರಣಕ್ಕಾಗಿಯೇ ಶ್ರೀಲಂಕಾದಲ್ಲಿ ರೇಡಿಯೋ ಸಂಸ್ಥೆ ಆರಂಭಿಸಲು ಪ್ರಯತ್ನಿಸುತ್ತದೆ. ಪಾಕಿಸ್ತಾನದ ಚಾನೆಲ್‌ಗಳಿಗೆ ಉಪಗ್ರಹದಲ್ಲಿ ಜಾಗಕೊಟ್ಟು ವಿಶ್ವದಲ್ಲಿ ಭಾರತ ವಿರೋಧಿ ಅಭಿಪ್ರಾಯ ಮೂಡಿಸುವ ಯತ್ನ ನಡೆಸುತ್ತದೆ."

ಉದಾರೀಕರಣನೀತಿಯಿಂದ ದೇಶವಿದೇಶಗಳ ಟಿ.ವಿ. ಚಾನೆಲ್‌ಗಳನ್ನು ನಾವು ವೀಕ್ಷಿಸಬಹುದಾಗಿದೆ. ಆದರೆ, ಇದು ಜನರನ್ನು ವಾಸ್ತವಿಕತೆಯಿಂದ ದೂರ ಒಯ್ದು ನಿರ್ವೀರ್ಯರನ್ನಾಗಿ ಮಾಡುತ್ತಿದೆ. ಲೈಂಗಿಕತೆ ಮತ್ತು ಹಿಂಸೆಯನ್ನು ಪ್ರಚೋದಿ ಸುತ್ತಿದೆ. ಇದನ್ನು ನಾವು '21ನೇ ಶತಮಾನಕ್ಕೆ ದಾಪುಗಾಲು' ಎಂದು ಹೆಮ್ಮೆ ಪಡುತ್ತಿದ್ದೇವೆ.

ಆಗಬೇಕಾದ್ದು ಏನು? ಎಂಬ ಪ್ರಶ್ನೆ ಕೇಳಿದರೆ, ಸರ್ಕಾರಿ ಸ್ವಾಮ್ಯದಲ್ಲಿರುವ ದೂರದರ್ಶನಕ್ಕೆ ಹೆಚ್ಚಿನ ಸ್ವಾತಂತ್ರ್ಯ ಕೊಡಬೇಕು.

ಅಲ್ಲದೆ, ದೇಶದ ಜ್ವಲಂತ ಸಮಸ್ಯೆಗಳ ಬಗ್ಗೆ, ನಮ್ಮ ಸಾಂಸ್ಕೃತಿಕ ಪರಂಪರೆಯ ಬಗ್ಗೆ, ನಮ್ಮ ಸಾಂಸ್ಕೃತಿಕ ನಿಲುವುಗಳ ಬಗ್ಗೆ, ನಮ್ಮ ದೇಶದ ಬಹುಭಾಷಾ ಬಹುಸಂಸ್ಕೃತಿಗಳ ಏಕತೆಯನ್ನು ಕಾಪಾಡುವುದರ ಬಗ್ಗೆ ಹೆಚ್ಚು ಹೆಚ್ಚಿನ ಕಾರ್ಯಕ್ರಮಗಳು ಬಿತ್ತರಗೊಳ್ಳಬೇಕು.

ಖ್ಯಾತ ಸಂಗೀತ ವಿದ್ವಾಂಸ ಭಾಸ್ಕರ ಚಂದಾವರ್ಕರ್ ಅವರ ಮಾತುಗಳಲ್ಲಿ ಹೇಳುವುದಾದರೆ- "ನವೀನ ತಂತ್ರಜ್ಞಾನ ನಮ್ಮ ಪ್ರಜ್ಞೆ ವಿವೇಚನೆಗಳನ್ನು ನಿಶ್ಚೇಷ್ಟಿತಗೊಳಿಸಿಬಿಟ್ಟಿದೆ. ತಂತ್ರಜ್ಞಾನದ ಅಪಾಯಕಾರಿ ಮುಖವಾದ ಸರ್ವರೀತಿಯ ಕೇಂದ್ರೀಕರಣ 'ಸಂವಾದ ಸಂಸ್ಕೃತಿ'ಯನ್ನು ಎಲ್ಲ ಮಟ್ಟದಲ್ಲೂ 'ಆದೇಶ ಸಂಸ್ಕೃತಿ'ಯಾಗಿ ಮಾರ್ಪಡಿಸುತ್ತಿದೆ. ಇಂದು ವಿನಿಮಯ ನಡೆಯುವುದು ಏಕಮುಖವಾಗಿ. ಪ್ರಭಾವಗಳು ಕೆಲಸ ಮಾಡುವುದು ಆ ದೇಶ ಸಂಸ್ಕೃತಿಯ ಅತ್ಯಾಕರ್ಷಕ ಸಂಸ್ಕೃತಿಯೇತರ ಪ್ರಲೋಭನೆಯ ಮೂಲಕ. ಸಮಾನ ಗೌರವದಿಂದಲ್ಲ."

ಈ ಮಾತು ಚಿಂತನಾರ್ಹ ಎಂದೆನಿಸುತ್ತದೆ.

ಹಾಲಿವುಡ್ ಚಿತ್ರಗಳನ್ನು ಸವಿಯುವ ವಿದ್ಯಾವಂತ ಯುವಜನಾಂಗವೇ ನಮ್ಮಲ್ಲಿದೆ. ಆದರೆ, ನಮ್ಮ ಸಂಸ್ಕೃತಿ, ನಮ್ಮ ಬಡತನ, ನಮ್ಮ ದಲಿತ ಸಮಸ್ಯೆ, ನಮ್ಮ ನಿರುದ್ಯೋಗ, ನಮ್ಮ ಮಹಿಳೆಯರ ಸಮಸ್ಯೆ, ನಮ್ಮ ಗಡಿಸಮಸ್ಯೆ, ನಮ್ಮ ಭಾಷಾಸಮಸ್ಯೆ - ಇವೆಲ್ಲವುಗಳನ್ನು ಎಂದಾದರೂ ಬಿಂಬಿಸಲು ಸಾಧ್ಯವಿದೆಯೇ? ಎಂದು ನಮ್ಮನ್ನೇ ನಾವು ಪ್ರಶ್ನಿಸಿಕೊಳ್ಳಬೇಕಾಗಿದೆ.

-ಎಸ್. ಮಾಲತಿ

ಅಸ್ತಿತ್ವ

ಗಂಗೆತ್ತಿನಂತೆ
ಸಿಂಗರಿಸಿಕೊಂಡು
ಯಜಮಾನನ ಹೆಜ್ಜೆಯೊಂದಿಗೆ
ಗೆಜ್ಜೆಗೂಡಿಸಿ
ತಲೆ ಎತ್ತದೇ
ತಲೆಯಾಡಿಸಿ
ತಲೆ ಒಳಗಿನದ್ದೂ ಜಾಡಿಸಿ
ಬೋಲೆ ಬಸವನಂತೆ
ಬಸವಳಿಯುವವರು (ದವರು.)

ಯಕ್ಷಪ್ರಶ್ನೆ

ಮೂಗುತ್ತಿ
ಮೂಕ ಪ್ರಶ್ನೆಯಾಗಿತ್ತು
ಹೇಳಲಾಗದ
ನುಂಗಲಾಗದ
ನೂರೊಂದು ಪ್ರಶ್ನೆಗಳ
ಕಟಕಟೆಯ
ಸನ್ನಿವೇಶದ
ಸಂಕೀರ್ಣಕ್ಕೆ
ತೆರೆದುಕೊಳ್ಳಲಾಗದೆ.

-ರಜಿಯಾ ಡಿ.ಬಿ.

ಮಾತೆಯರು ಮಾನ್ಯರಾಗಿದ್ದಾಗ

ಬಂಗಾಳಿ ಮೂಲ: ದೇವಿ ಪ್ರಸಾದ್ ಚಟ್ಟೋಪಾಧ್ಯಾಯ
ಅನುವಾದ: ಜಿ. ಕುಮಾರಪ್ಪ
ನವಕರ್ನಾಟಕ ಪ್ರಕಾಶನ, ಬೆಂಗಳೂರು, 1997.
ಪುಟ: 56 :: ಬೆಲೆ: ರೂ. 15/-

ದಿ। ದೇವೀಪ್ರಸಾದ್ ಚಟ್ಟೋಪಾಧ್ಯಾಯರು ಕನ್ನಡಿಗರಿಗೆ ಅಪರಿಚಿತರೇನೂ ಅಲ್ಲ. ಅವರ ಅನೇಕ ಇಂಗ್ಲಿಷ್ ಗ್ರಂಥಗಳು ಅನುವಾದ ರೂಪದಲ್ಲಿ ಕನ್ನಡದಲ್ಲಿ ಲಭ್ಯವಿವೆ. ಈ ಕೃತಿಯ ವಿಶೇಷವೇನೆಂದರೆ ಇದು ಮೂಲ ಬಂಗಾಳಿಯಿಂದ ನೇರವಾಗಿ ಕನ್ನಡಕ್ಕೆ ಬಂದಿದೆ. ಭಾಷಾಂತರ ಕೆಲಸವನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸಿದವರು ಕಲ್ಕತ್ತಾದ ರಾಷ್ಟ್ರೀಯ ಪುಸ್ತಕ ಭಂಡಾರದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿರುವ ಶ್ರೀ ಜಿ. ಕುಮಾರಪ್ಪನವರು. ಈ ಪುಟ್ಟ ಪುಸ್ತಕದ ಇನ್ನೊಂದು ವಿಶೇಷವೇನೆಂದರೆ ಶ್ರೀ ದೇವೀಪ್ರಸಾದರು ಬಂಗಾಳದ ಶಾಲಾಕಾಲೇಜುಗಳಲ್ಲಿ ಓದುತ್ತಿರುವ ಸಣ್ಣವಯಸ್ಸಿನ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟು ಈ ಕೃತಿಯನ್ನು ರಚಿಸಿದ್ದಾರೆ.

ದಿ। ದೇವೀಪ್ರಸಾದ್ ಚಟ್ಟೋಪಾಧ್ಯಾಯರು ಅನನ್ಯ ರೀತಿಯ ವಿದ್ವಾಂಸರು. ಮಾರ್ಕ್ಸ್ ಸಿದ್ಧಾಂತವನ್ನು ಅತ್ಯಂತ ಸೂಕ್ಷ್ಮವಾಗಿ ಅಭ್ಯಸಿಸಿರುವ ಕೆಲವೇ ಮಂದಿ ಭಾರತೀಯರಲ್ಲಿ ಒಬ್ಬರಾದ ಇವರು ಬರವಣಿಗೆಗಳಲ್ಲಿ ತಮ್ಮ ವ್ಯಕ್ತಿತ್ವದ ವಿಶಿಷ್ಟ ಮುದ್ರೆಯನ್ನು ಒತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಇವರು ಅನ್ವೇಷಣೆ ನಡೆಸಿದ ಭಾರತೀಯ ಇತಿಹಾಸದಲ್ಲಿ ರಾಜಮಹಾರಾಜರಿಗೆ ಜಾಗವಿಲ್ಲ, ದಂಡಯಾತ್ರೆ ಯುದ್ಧಗಳಿಗೆ ಅಥವಾ ಚಕ್ರವರ್ತಿಗಳು ಮಾಡಿದ ದಾನಧರ್ಮಗಳಿಗೆ ಸ್ಥಾನವಿಲ್ಲ, ಬದಲಾಗಿ ಅವರು ಈ ದೇಶದ ಸಾಮಾನ್ಯ ಜನರಲ್ಲಿ ಐಹಿಕ ಜೀವನ ಬೆಳೆದುಬಂದ ರೀತಿಯನ್ನು ಮತ್ತು ಭೌತ ಜೀವನದ ಸೆಲೆಯಿಂದ ಮೂಡಿಬಂದ ನಮ್ಮ ವಿಜ್ಞಾನ ತಂತ್ರಜ್ಞಾನ ಮತ್ತು ದರ್ಶನಗಳನ್ನು ಬಿಡಿಬಿಡಿಯಾಗಿ ವಿಶ್ಲೇಷಿಸಿ ನಮ್ಮ ಮುಂದೆ ಇಡುತ್ತಾರೆ.

ಮಕ್ಕಳಿಗಾಗಿ ಬರೆದ ಈ ಪುಟ್ಟ ಪುಸ್ತಕದಲ್ಲೂ ಅವರು ತಮ್ಮ ವೈಜ್ಞಾನಿಕ ದೃಷ್ಟಿಕೋನವನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಈ ಪುಸ್ತಕದಲ್ಲಿ ಅವರು ವಿಶ್ಲೇಷಿಸಲು ಕೈಗೆತ್ತಿಕೊಂಡ ವಿಷಯದ ವ್ಯಾಪ್ತಿ ಅಗಾಧ. ಮಾನವನ ಉದಯ ಮತ್ತು ವಿಕಾಸದ ಹಾದಿಯ ಒಂದು ನಿರ್ಣಾಯಕ ಘಟ್ಟದಲ್ಲಿ ಮಹಿಳೆಯು ಹೇಗೆ ಅಂದಿನ ಮಾನವ ಸಂಸ್ಕೃತಿ ನಾಗರಿಕತೆಗಳ ಮಧ್ಯಬಿಂದುವಾಗಿ ವಿಕಾಸವಾಗಿ ಮೂಡಿಬಂದಳು ಹಾಗೂ ತದನಂತರ ಅವಳು ನಡೆದುಬಂದ ದಾರಿಯ ವಿವಿಧ ಹಂತಗಳು ಯಾವುವು ಎಂಬುದನ್ನೆಲ್ಲ ಅವರು ಸಂಕ್ಷಿಪ್ತವಾಗಿ ವಿವರಿಸುತ್ತಾರೆ. ಕಾಲದೇಶಗಳಲ್ಲಿ ಹರಿದುಹಂಚಿಹೋಗಿರುವ ಮಾತೃಪ್ರಧಾನ ಸಾಮಾಜಿಕ ವ್ಯವಸ್ಥೆಗಳ ಸಾಕ್ಷ್ಯಾಧಾರಗಳನ್ನೂ ಅವರು ಪರೀಕ್ಷಿಸುತ್ತಾರೆ. ಈ ದಿಸೆಯಲ್ಲಿ ಲಭ್ಯವಿರುವ ಎಲ್ಲ ಮಾಹಿತಿ ಸಾಕ್ಷ್ಯಾಧಾರಗಳನ್ನು ಕೂಲಂಕಷವಾಗಿ ವಿವರಿಸುವುದಕ್ಕೆ ಅವರು ಒಂದು ಗ್ರಂಥಮಾಲೆಯನ್ನೇ ಪ್ರಕಟಿಸಬೇಕಾಗಿತ್ತು. ಆದರೆ ಅವರ ಉದ್ದೇಶ ಪಂಡಿತಮಾನ್ಯರನ್ನು ಸಂಪ್ರೀತಗೊಳಿಸುವುದಲ್ಲ, ಬೆಳೆಯುತ್ತಿರುವ ಮಕ್ಕಳಲ್ಲಿ ಮಾನವನ ಪೂರ್ವೇತಿಹಾಸದ ಬಗ್ಗೆ ಅಭಿರುಚಿ ಹುಟ್ಟಿಸಿ ಮುಂದೆ ಅವರಲ್ಲಿ ಕೆಲವರಾದರೂ ಪ್ರೌಢ ಅಧ್ಯಯನಗಳನ್ನು ಕೈಗೆತ್ತಿಕೊಳ್ಳುವಂತೆ ಪ್ರೇರೇಪಿಸುವುದು ಅವರ ಗುರಿಯಾಗಿತ್ತು. ಅದಕ್ಕಾಗಿಯೇ ಅತ್ಯಂತ ಸಂಕ್ಷಿಪ್ತವಾಗಿ, ಸರಳವಾಗಿ ಮತ್ತು ಒಪ್ಪವಾಗಿ ಮಾನವನ ವಿಕಾಸದಲ್ಲಿ ಸ್ತ್ರೀಯ ಪಾತ್ರ ಎಷ್ಟು ಮಹತ್ವದ್ದಾಗಿತ್ತು ಎಂಬುದನ್ನು ಅವರು ವಿವರಿಸಿದ್ದಾರೆ.

ನೂರಾರು ಸಹಸ್ರ ವರ್ಷಗಳ ಮನುಷ್ಯನ ಪೂರ್ವೇತಿಹಾಸದಲ್ಲಿ ಅತಿ ಮಹತ್ವದ ಮಜಲುಗಳು ತೀರಾ ಇತ್ತೀಚಿನವು. ಕಾಲದ ಪರಿಕಲ್ಪನೆಯನ್ನು ಮಕ್ಕಳಿಗೆ ಮನದಟ್ಟು ಮಾಡುವುದಕ್ಕಾಗಿ ಶ್ರೀ ದೇವೀ ಪ್ರಸಾದರು ಒಂದು ಮಾಂತ್ರಿಕ ಗಡಿಯಾರದ ಉದಾಹರಣೆಯನ್ನು ಸೃಷ್ಟಿಸಿದ್ದಾರೆ. ಮಾಂತ್ರಿಕ ಗಡಿಯಾರದಲ್ಲಿ ಒಂದು ಗಂಟೆಯೆಂದರೆ ಇತಿಹಾಸದ ಇಪ್ಪತ್ತು ಸಾವಿರ ವರ್ಷಗಳು! ಮಾಂತ್ರಿಕ ಗಡಿಯಾರದ ಕಳೆದ ಹನ್ನೊಂದು ಗಂಟೆಗಳಲ್ಲಿ ಮನುಷ್ಯ ಸಾಧಿಸಿದ್ದು ಹೆಚ್ಚೆಂದರೆ 'ಒರಟೊರಟಾದ ನಾಲ್ಕಾರು ಕಲ್ಲಿನ ಆಯುಧಗಳು' ಮಾತ್ರ. ಇಷ್ಟು ಸುದೀರ್ಘ ಕಾಲ ಮನುಷ್ಯರು ಕೇವಲ ಆಹಾರ ಸಂಗ್ರಾಹಕರಾಗಿದ್ದರು. ಸುಮಾರು 20,000 ವರ್ಷಗಳಿಂದ ಈಚೆಗೆ ಆಹಾರ ಸಂಗ್ರಾಹಕರಾಗಿದ್ದ ಮನುಷ್ಯರು ಆಹಾರ ಉತ್ಪಾದನೆಗೆ ತೊಡಗಿದರು. ನೂತನ ಶಿಲಾಯುಗದ ಎರಡು ಮಹತ್ಸಾಧನೆಗಳಲ್ಲಿ ಮೊದಲನೆಯದು ಕೃಷಿ ಮತ್ತು ಎರಡನೆಯದು ಪಶುಪಾಲನೆ. ಸಸ್ಯ ಮತ್ತು ಪ್ರಾಣಿ ಸಂಕುಲಗಳಲ್ಲಿ ತನಗೆ ಉಪಯುಕ್ತವಾದುವನ್ನು ಪ್ರತ್ಯೇಕಿಸಿ ಅವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ನಿಯಂತ್ರಿಸಿ ಪಳಗಿಸಿ ಬದುಕನ್ನು ಹಸನುಗೊಳಿಸುವ ಈ ಕೌಶಲ್ಯ ಮಾನವನ ಅದೃಷ್ಟದ ಬಾಗಿಲನ್ನೇ ತೆರೆಯಿತು ಎನ್ನಬಹುದು.

ಈ ಎರಡು ಸಾಧನೆಗಳು ಬೇರೆ ಬೇರೆಯಾಗಿ ಆಗಿರಬಹುದು, ಒಂದಕ್ಕೊಂದು ಸಂಪರ್ಕವಿರದ ಪ್ರತ್ಯೇಕ ಭೂಭಾಗಗಳಲ್ಲಿ ಆಗಿರಬಹುದು. ಆದರೆ ಈ ಆವಿಷ್ಕಾರಗಳು ಎಲ್ಲಿ ಹೇಗೆ ಸಂಭವಿಸಿದವು ಎಂಬುದಕ್ಕಿಂತ ಈ ಸಾಧನೆಗಳ ಪರಿಣಾಮವಾಗಿ ಮಾನವಕುಲದಲ್ಲಿ

ಬೆಳೆದುಬಂದ ಶ್ರಮ ವಿಭಜನೆಯ ಸ್ವರೂಪ ನಮಗೆ ಮುಖ್ಯವಾದದ್ದು. ಆಹಾರ ಉತ್ಪಾದನೆಯ ಪ್ರಕ್ರಿಯೆಯಲ್ಲಿ ಪಶುಸಂಗೋಪನೆಗಿಂತಲೂ ವ್ಯವಸಾಯ ಮುಖ್ಯವಾದುದು. ಕೃಷಿಯಿಂದಾಗಿ ಜನಸಮುದಾಯಗಳು ಕ್ರಮೇಣ ಫಲವತ್ತಾದ ನದಿದಂಡೆಗಳಲ್ಲಿ ನೆಲೆನಿಲ್ಲುವಂತೆ ಆಯಿತು. ಪ್ರಾಚೀನ ನಾಗರೀಕತೆಗಳೆಲ್ಲವೂ ನದಿ ದಂಡೆಗಳಲ್ಲೇ ವಿಕಾಸಗೊಂಡವು. ಈಜಿಪ್ಪಿನ ನೈಲ್ ನದೀ ಪ್ರದೇಶದಿಂದ ಹಿಡಿದು ಸಿಂಧೂ ನದಿ ಕಣಿವೆಯವರೆಗೆ, ಹಾಗೂ ಚೀನಾದಲ್ಲಿ ಮತ್ತು ಆಗ್ನೇಯ ಏಷ್ಯಾಗಳಲ್ಲಿ ಪ್ರಾಚೀನ ನಾಗರಿಕತೆಗಳು ಅರಳಿದ್ದರೆ, ಅವುಗಳಿಗೆ ಮುಖ್ಯಕಾರಣ ಕೃಷಿಯ ಆವಿಷ್ಕಾರ ಮತ್ತು ಈ ಅವಿಷ್ಕಾರದಲ್ಲಿ ಪ್ರಧಾನ ಪಾತ್ರ ವಹಿಸಿದ ಮಹಿಳೆ.

ಮಕ್ಕಳನ್ನು ಹೆತ್ತು ಸಾಕಿ ದೊಡ್ಡವರನ್ನಾಗಿ ಮಾಡುವ ಸಾಮಾಜಿಕವಾಗಿ ಅವರನ್ನು ಪ್ರಸ್ತುತರನ್ನಾಗಿಸುವ ಗುರುತರ ಹೊಣೆ ಮಹಿಳೆಯರದ್ದು. ಈ ಕೌಟುಂಬಿಕ ಹೊಣೆಯನ್ನು ಚೆನ್ನಾಗಿ ನಿರ್ವಹಿಸುವುದಕ್ಕೆ ಒಂದೆಡೆ ನೆಲೆ ನಿಂತು ಮನೆ ಮಾಡಿ ಸ್ವಂತ ಹಿತ್ತಲು ಮತ್ತು ಕ್ರಮೇಣ ಸುತ್ತಮುತ್ತಲ ಜಾಗವನ್ನು ಸಮತಟ್ಟು ಮಾಡಿ ಹೊಲಗದ್ದೆಗಳಲ್ಲಿ ಕೃಷಿ ಮಾಡುವುದಕ್ಕೆ ಪ್ರಾರಂಭಿಸಿದವಳು ಮಹಿಳೆಯೇ. ಆಹಾರ ಸಂಗ್ರಾಹಕ ಹಂತದಲ್ಲಿ ಗಂಡುಹೆಣ್ಣುಗಳ ನಡುವೆ ಹೇಳಿಕೊಳ್ಳುವಂತಹ ಶ್ರಮ ವಿಭಜನೆ ಅಷ್ಟಾಗಿ ಇರಲಿಲ್ಲ. ಪ್ರಕೃತಿ ದತ್ತವಾದ ಹಣ್ಣುಹಂಪಲುಗಳನ್ನು ಕೊಯಿದು ತರುವುದಕ್ಕೆ ಗೆಡ್ಡೆಗೆಣಸುಗಳನ್ನು ಅಗೆದು ತೆಗೆಯುವುದಕ್ಕೆ ಅಥವಾ ಸುಲಭವಾಗಿ ಸಿಗುವ ಪ್ರತಿಭಟಿಸದ ಜೀವಿಗಳಾದ ಸಣ್ಣ ಮೀನು, ಏಡಿ, ಚಿಪ್ಪಿನ ಹುಳ ಇತ್ಯಾದಿಗಳನ್ನು ಹಿಡಿದು ತಂದು ಬೇಯಿಸಿಯೋ, ಬೇಯಿಸದೆಯೇ ತಿನ್ನುವುದಕ್ಕೆ ವಿಶೇಷವಾದ ಪರಿಕರಗಳೇನೂ ಬೇಕಾಗಿರಲಿಲ್ಲ. ಹಾಗೆಯೇ ಮನೆಯ ಸಮೀಪ ನೆಲವನ್ನು ಸಾಧಾರಣ ಕೋಲಿನಿಂದ ಅಗೆದು ಹದಮಾಡಿ ಬೀಜ ಚೆಲ್ಲಿ ಬೇಕಾದ ಬೆಳೆಯನ್ನು ತೆಗೆಯಲು ಪ್ರಾರಂಭಿಸಿದವಳು ಮಹಿಳೆಯೇ. ಮನೆಯನ್ನು ಕಟ್ಟಿದವಳು, ಚರ್ಮದ ಅಥವಾ ತೊಗಟೆಯ ಬಟ್ಟೆಯನ್ನು ಹೊಲಿದವಳು, ಅಷ್ಟೇಕೆ ಮಣ್ಣಿನಿಂದ ಮಡಕೆಯನ್ನು ಮಾಡಿ ಅಡಿಗೆಯ ಕೆಲಸವನ್ನು ಪ್ರಾರಂಭಿಸಿದವಳೂ ಮಹಿಳೆಯೇ. ನೂಲುವುದನ್ನು ಆವಿಷ್ಕಾರ ಮಾಡಿದವಳೂ ಸ್ತ್ರೀಯೇ.

ಆದ್ದರಿಂದ ವ್ಯವಸಾಯ ಪ್ರಧಾನವಾದ ನದಿ ಕಣಿವೆಗಳ ನಾಗರೀಕತೆಗಳಲ್ಲಿ ಸ್ತ್ರೀ ಕೇಂದ್ರಿತವಾದ ಸಮಾಜಗಳೇ ಮೊದಲಿಗೆ ತಲೆಯೆತ್ತಿದ್ದವು. ಈ ವ್ಯವಸ್ಥೆಗಳ ಜೀವ ದೇವತೆಯರೆಲ್ಲ ಸ್ತ್ರೀಯರೇ ಆಗಿದ್ದರು. ಆಗಿ ಹೋದ ಪ್ರಾಚೀನ ನಾಗರಿಕತೆಗಳು ಬಿಟ್ಟು ಹೋದ ಸಾಕ್ಷ್ಯಾಧಾರಗಳಲ್ಲದೆ ಇಂದು ಪ್ರಚಲಿತ ವಿರುವ ಅನೇಕ ಮಾತೃ ಪ್ರಧಾನ ಸಮಾಜಗಳನ್ನು ವಿಶ್ಲೇಷಿಸಿದರೆ 'ಮಾತೆಯರು ಮಾನ್ಯರಾಗಿದ್ದಾಗಿ'ನ ಕಾಲದ ಸಾಕ್ಷಿ ಪುರಾವೆಗಳೂ ದೊರೆಯುತ್ತವೆ. ಪ್ರಪಂಚದಾದ್ಯಂತ ಮಾತೃಪ್ರಧಾನ ಪದ್ಧತಿಯನ್ನು ಅನುಸರಿಸುತ್ತಿರುವ ಬುಡಕಟ್ಟು ಜನಾಂಗಗಳು ಒಂದು ಕಾಲದಲ್ಲಿ ಮಾತೃ ಪ್ರಧಾನ ವ್ಯವಸ್ಥೆಯು ಹೆಚ್ಚು ವ್ಯಾಪಕವಾಗಿ ಪ್ರಚಲಿತವಿತ್ತು ಎಂಬುದಕ್ಕೆ ಸಾಕಷ್ಟು ಮಾಹಿತಿಗಳನ್ನು ಒದಗಿಸುತ್ತವೆ.

ಶ್ರೀ ದೇವೀ ಪ್ರಸಾದರು ನಮ್ಮ ದೇಶದ ಈಶಾನ್ಯದ ಗಾರೋ ಗುಡ್ಡ ಬೆಟ್ಟಗಳಲ್ಲಿ ವಾಸ ಮಾಡುತ್ತಿರುವ ಖಾಸೀ ಬುಡಕಟ್ಟು ಜನರಲ್ಲಿ ಪ್ರಚಲಿತವಿರುವ ಮಾತೃಪ್ರಧಾನ ಸಮಾಜ ವ್ಯವಸ್ಥೆಯನ್ನು ವಿಶ್ಲೇಷಿಸುತ್ತಾರೆ. ಖಾಸಿಯರಲ್ಲಿ ಕುಟುಂಬದ ಮುಖ್ಯಸ್ಥೆ ತಾಯಿ. ಅವರಲ್ಲಿ ತಾಯಿಯ ಆಸ್ತಿಗೆ ಆಕೆಯ ಹೆಣ್ಣುಮಕ್ಕಳೇ ಹಕ್ಕುದಾರರು. ಹೆಣ್ಣಾಗಲಿ ಗಂಡಾಗಲಿ ಪ್ರತಿಯೊಬ್ಬರೂ ತಮ್ಮನ್ನು ತಾಯಿಯ ಮತ್ತು ತಾಯಿಯ ವಂಶದಲ್ಲಿ ಗುರುತಿಸಿಕೊಳ್ಳುತ್ತಾರೆ. ಗಂಡ-ಹೆಂಡಿರು ಪ್ರತ್ಯೇಕವಾಗಿ ಅವರವರ ತಾಯಿಯ ಕುಟುಂಬಕ್ಕೆ, ಕುಲಕ್ಕೆ ಮತ್ತು ವಂಶಕ್ಕೆ ಸೇರಿದವರಾಗಿರುತ್ತಾರೆ. ಸಹೋದರ ಸಹೋದರಿಯರು ಒಂದೇ ಕುಲಕ್ಕೆ ಸೇರಿದವರಾಗಿರುತ್ತಾರೆ. ಪಿತೃಪ್ರಧಾನ ವ್ಯವಸ್ಥೆಯನ್ನು ಅನುಸರಿಸುವ ನಮ್ಮ ಅನೇಕರಲ್ಲಿ ಇದಕ್ಕಿಂತ ಭಿನ್ನವಾದ ವ್ಯವಸ್ಥೆ ಇದೆ. ವಿವಾಹಾನಂತರ ಹೆಣ್ಣು ತನ್ನ ಗಂಡನ ಕುಲಕ್ಕೆ ಸೇರುತ್ತಾಳೆ; ತಂದೆಯ ಆಸ್ತಿ ಗಂಡು ಮಕ್ಕಳಿಗೆ ಸಲ್ಲುತ್ತಿತ್ತು. ಕುಟುಂಬದ ಹೆಸರು ತಂದೆಯಿಂದ ಮಗನಿಗೆ ಅವನಿಂದ ಅವನ ಗಂಡು ಮಕ್ಕಳಿಗೆ ಮುಂದುವರಿದುಕೊಂಡು ಹೋಗುತ್ತದೆ. ಸ್ತ್ರೀ ಪ್ರಧಾನ ವ್ಯವಸ್ಥೆಯಲ್ಲಿ ಎಲ್ಲವೂ ಇದಕ್ಕಿಂತ ಭಿನ್ನ. ಒಟ್ಟಾರೆ ವಂಶಧಾರೆಯು ಸ್ತ್ರೀಯರ ಮೂಲಕವೇ ಮುಂದುವರಿಯುತ್ತದೆ. ಖಾಸಿಯರಲ್ಲಿ ಸ್ತ್ರೀ ದೇವತೆಗಳಿಗೇ ಹೆಚ್ಚು ಸ್ಥಾನಮಾನ.

ಮಾತೃಪ್ರಧಾನ ವ್ಯವಸ್ಥೆಯ ಮುಖ್ಯ ಅಂಶಗಳನ್ನು ತಿಳಿಯಬೇಕಾದರೆ ಕನ್ನಡಿಗರು ದೇಶದ ಈಶಾನ್ಯ ಭಾಗಕ್ಕೆ ಹೋಗಬೇಕಾಗಿಲ್ಲ. ನಮ್ಮವರೇ ಆದ ತುಳು ಮಾತನ್ನಾಡುವ ಜನರಲ್ಲಿ ಮತ್ತು ಕೇರಳದ ಬಹುಪಾಲು ಸ್ಥಳೀಯರಲ್ಲಿ ಮಾತೃ ಪ್ರಧಾನ ವ್ಯವಸ್ಥೆಯೇ ಪ್ರಚಲಿತವಿದೆ. ತುಳುನಾಡಿನಲ್ಲಿ ಸ್ಥಳೀಯರೂ ಅದನ್ನು 'ಅಳಿಯಕಟ್ಟು' (ಮಕ್ಕಳ ಕಟ್ಟುವಿಗಿಂತ ಭಿನ್ನವಾಗಿ) ಎಂತಲೂ ಕೇರಳದಲ್ಲಿ 'ಮರುಮಕ್ಕತ್ತಾಯಂ' ಎಂತಲೂ ಕರೆಯುತ್ತಾರೆ. ಪ್ರಾಚೀನ ಕಾಲದ ರೋಮನ್ ಸಮಾಜದಲ್ಲಿ, ಚೀಣಾದ ದಕ್ಷಿಣ ಭಾಗದಲ್ಲಿ, ಟಿಬೆಟ್ಟಿನಲ್ಲಿ, ಆಫ್ರಿಕಾದಲ್ಲಿ ಅಷ್ಟೇಕೆ ಸಿಂಧೂನದೀ ಕಣಿವೆಯ ನಾಗರಿಕತೆಯಲ್ಲಿ ಕೂಡಾ ಸ್ತ್ರೀ ಪ್ರಧಾನ ವ್ಯವಸ್ಥೆಯೇ ಇತ್ತೆಂಬುದಕ್ಕೆ ಸಾಕ್ಷ್ಯಾಧಾರಗಳು ದೊರಕುತ್ತವೆ.

ಒಮ್ಮೆ ಸಾರ್ವತ್ರಿಕವಾಗಿದ್ದ ಹೆಚ್ಚು ವ್ಯಾಪಕವಾಗಿದ್ದ ಮಾತೃ ಪ್ರಧಾನ ವ್ಯವಸ್ಥೆ ಕ್ರಮೇಣ ಶಿಥಿಲಗೊಂಡು ಜಗತ್ತಿನ ಕೆಲವೇ ಕೆಲವು ಜನಸಮುದಾಯಗಳಲ್ಲಿ ಮಾತ್ರ ಉಳಿಯಲು ಕಾರಣಗಳೇನು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಪಶುಪಾಲಕ ಜನಸಮುದಾಯಗಳು ಮುಖ್ಯವಾಗಿ ಸಂಚಾರೀ ಸಮುದಾಯಗಳಾಗಿದ್ದವು. ಹುಲ್ಲುಗಾವಲುಗಳನ್ನು ಹುಡುಕಿಕೊಂಡು ಪ್ರದೇಶದಿಂದ ಪ್ರದೇಶಕ್ಕೆ ಅವು ವಲಸೆ ಹೋಗುತ್ತಿದ್ದವು. ಕುದುರೆಯಂತಹ ವೇಗ ಸಾಧ್ಯತೆಯ ಪ್ರಾಣಿಯನ್ನು ಪಳಗಿಸಿದ ಮೇಲೆ ಪಶುಪಾಲಕ ಸಮುದಾಯಗಳು ಹೆಚ್ಚು ಹೆಚ್ಚು ಆಕ್ರಮಣಶೀಲತೆಯನ್ನು ಬೆಳೆಸಿಕೊಂಡುವೆ? ಶಾಂತ ಸ್ವಭಾವದ ಕೃಷಿ ಪ್ರಧಾನವಾದ ಮಾತೃಕೇಂದ್ರಿತ ಸಮಾಜ ವ್ಯವಸ್ಥೆಗಳು ಉಗ್ರಸ್ವಭಾವದ ಪಶುಪಾಲಕ ಪಿತೃಪ್ರಧಾನ ಸಮಾಜ ವ್ಯವಸ್ಥೆಗಳ ಆಕ್ರಮಣಕ್ಕೆ ತುತ್ತಾಗಿ ಸಾಂಸ್ಕೃತಿಕವಾಗಿ ಹಿಮ್ಮೆಟ್ಟಿದವೆ? ಕೃಷಿಯ ಮೇಲೆ ಪಶುಪಾಲನೆಯ ಪ್ರಭಾವ ಹೆಚ್ಚಾದಂತೆ ಸ್ತ್ರೀಯ ಸ್ಥಾನಮಾನಕ್ಕೆ ಧಕ್ಕೆಯಾಗುತ್ತಾ ಬಂದುದಕ್ಕೆ ಉದಾಹರಣೆಗಳಿವೆ. ಎತ್ತುಗಳನ್ನು ಹೂಡಿ ನೊಗನೇಗಿಲುಗಳನ್ನು ಉಪಯೋಗಿಸಿ ಕೃಷಿಯನ್ನು ಹೆಚ್ಚು ವ್ಯಾಪಕವಾಗಿ ಜೀವನಾಧಾರವನ್ನಾಗಿ ಬೆಳೆಸಿದಷ್ಟೂ ಪುರುಷರ ಪ್ರಾಧಾನ್ಯ ಹೆಚ್ಚುತ್ತಾ ಬಂತೆ? ಮಾನವ-ಆವಿಷ್ಕಾರಗಳಾದ ಈಟಿ ಭರ್ಜಿಗಳು, ಬಿಲ್ಲುಬಾಣಗಳು ಹಾಗೂ ನೊಗ ನೇಗಿಲುಗಳು ಕ್ರಮೇಣ ಕಸೂತಿ ಕೆಲಸದಲ್ಲಿ ಕುಸುರಿ ಕೆಲಸಗಳಲ್ಲಿ, ನೂಲುವ ನೇಯುವ ಮಡಕೆ-ಕುಡಿಕೆ, ತಡಿಕೆ ತಯಾರಿಸುವ, ಮನೆಕಟ್ಟುವ ಕೆಲಸಗಳಲ್ಲಿ ತೊಡಗಿದ್ದ ಶ್ರಮಜೀವಿ ಮಹಿಳೆಯರನ್ನು ಮೂಲೆಗುಂಪಾಗಿಸಿದುವೆ?

ಸಿಂಧೂಕಣಿವೆಯ ನಾಗರಿಕತೆಯನ್ನೂ ವೈದಿಕ ಸಂಸ್ಕೃತಿ ಯನ್ನೂ ಹೋಲಿಸಿದರೆ ದೇವೀಪ್ರಸಾದರ ನಿಲುವು ಅರ್ಥ ವಾದೀತು. ಕೃಷಿಯೇ ಪ್ರಧಾನವಾಗಿದ್ದ (ವ್ಯಾಪಾರದ ಜೊತೆ) ಸಿಂಧೂನದೀ ಸಂಸ್ಕೃತಿಯಲ್ಲಿ ಸ್ತ್ರೀಯೇ ಸಮಾಜದ ಕೇಂದ್ರ ಶಕ್ತಿಯಾಗಿದ್ದಳು. ಆದರೆ ವೈದಿಕ ಸಂಸ್ಕೃತಿಯಲ್ಲಿ ಪುರುಷರೇ ಪ್ರಧಾನವಾಗಿ ಕಾಣುತ್ತಾರೆ. ವೈದಿಕ ದೇವ-ದೇವತೆಯರೆಲ್ಲ ಮುಖ್ಯವಾಗಿ ಪುರುಷರೇ. ಪಶುಪಾಲನೆಯೇ ವೇದಕಾಲದ ಜನರ ಉದ್ಯೋಗವಾಗಿದ್ದಿತು. ಸಿಂಧೂನದಿ, ಗಂಗಾಯಮುನಾ ನದೀ ಕಣಿವೆಗಳಲ್ಲಿ ಕ್ರಮೇಣ ವೇದಕಾಲದ ಸಂಸ್ಕೃತಿಯ ಜನ ಕೃಷಿ ಮಾಡಲು ನೆಲೆನಿಂತಾಗ ಪಶುಪಾಲನೆ ಮತ್ತು ಕೃಷಿಯ ಸಂಯುಕ್ತ ವ್ಯವಸ್ಥೆ ತಲೆಯೆತ್ತಿತು. ಇವರ ಬೇಸಾಯ ಪದ್ಧತಿ ಸುಲಭ ಪರಿಕರಗಳ ಸರಳ ಬೇಸಾಯವಾಗಿರದೆ, ಎತ್ತುಗಳನ್ನು ಹೂಡಿ, ನೊಗ ನೇಗಿಲುಗಳನ್ನು ಬಳಸಿ ಮಾಡುವ ಹೆಚ್ಚು ಸಂಕೀರ್ಣ ಕೃಷಿಯಾಗಿದ್ದಿತು. ಆದ್ದರಿಂದ ಕ್ರಮೇಣ ಪಿತೃಪ್ರಧಾನ ವ್ಯವಸ್ಥೆಯೇ ವಿಜೃಂಭಿಸಿತು.

ಮೊದಲೇ ಹೇಳಿದಂತೆ ದೇವಿಪ್ರಸಾದರು ಈ ಕೃತಿಯಲ್ಲಿ ಪ್ರಸ್ತಾಪಿಸಿರುವ ವಿಷಯಗಳ ವ್ಯಾಪ್ತಿ ಅಪಾರ. ಅವರು ಎತ್ತಿರುವ ಅನೇಕ ಪ್ರಶ್ನೆಗಳು ವಿವಾದಾತೀತವೆಂದು ಹೇಳಲೂ ಬರುವುದಿಲ್ಲ. ಇತಿಹಾಸದ ಅನೇಕ ಸಮಸ್ಯೆಗಳಂತೆ ಮಾತೃ ಪ್ರಧಾನ ಸಮಾಜ ವ್ಯವಸ್ಥೆಯ ಆದ್ಯತೆಯ ಪ್ರಶ್ನೆಗೂ ಇದಮಿತ್ಥಂ ಎನ್ನುವ ಸಲೀಸು ಉತ್ತರವಿಲ್ಲ. ದೇವೀಪ್ರಸಾದರ ಈ ಕೃತಿಯು ಓದುಗರಲ್ಲಿ ನಮ್ಮ ಸಮಾಜದ ಈ ಮುಖ್ಯ ಅಂಶದ ಬಗ್ಗೆ ಆಸಕ್ತಿ ಮೂಡಿಸುವುದರಲ್ಲಿ ಸಂಶಯವಿಲ್ಲ.

- ಟಿ.ಆರ್. ಶ್ಯಾಮ ಭಟ್ಟ

ನಮ್ಮ ಕಥಾಸಾಹಿತ್ಯದ ಜಗತ್ತಿನೊಳಗಿನ ಹೆಣ್ಣುಗಳು, ಇತರ ಪಿತೃಪ್ರಧಾನ ಸಮಾಜಗಳಲ್ಲಿನ ತಮ್ಮ ಪ್ರತಿರೂಪಗಳೊಂದಿಗೆ ಕೆಲವು ವಿಶಿಷ್ಟ ಲಕ್ಷಣಗಳನ್ನು ಹಂಚಿಕೊಂಡಿರಬಹುದು. ಉದಾಹರಣೆಗೆ, ಹೆಣ್ತನದ ಅತ್ಯಂತ ಪ್ರಧಾನಪಾತ್ರಗಳೆಂದು ತಾಯ್ತನ, ಗೃಹಿಣೀತನಗಳಿಗೆ ಮಾತ್ರ ಒತ್ತುಕೊಡುವುದರ ವಿರುದ್ಧ ಖಾಸಗಿಯಾದ ಪ್ರತಿಭಟನೆ ಎಲ್ಲೆಡೆಯೂ ಸಮಾನ ಮಾದರಿಗಳಲ್ಲಿ ಕಂಡುಬರುತ್ತದೆ. ಹಾಗಿದ್ದರೂ ನಮ್ಮ ಕಥಾಸಾಹಿತ್ಯದಲ್ಲಿ ಬಿಂಬಿತವಾಗುವಂತೆ, 'ಭಾರತೀಯ ಹೆಣ್ಣಿನ ಕಲ್ಪನೆಯಲ್ಲಿ ಆಶಾಭಂಗದ ತೀವ್ರ ಯಾತನೆ ಹೆಚ್ಚಾಗಿದೆಯೇ ಹೊರತು ಉರಿಯುವ ಕ್ರೋಧವಲ್ಲ.

ಇಲ್ಲಿನ ಸ್ತ್ರೀಯರ ಕಲ್ಪನೆಯು 'ಇಬ್ಬರು ವ್ಯಕ್ತಿಗಳ - ಏಕವಿಶ್ವ'ಕ್ಕಾಗಿ ನಿರಂತರ ಹಂಬಲಿಸುತ್ತಿರುವುದರ ಸುತ್ತಲೇ ತಿರುಗುವಂತೆ ತೋರುತ್ತದೆ. 'ಜೋಡಿ'ಯ ಈ 'ವಿಶ್ವ'ದೊಳಗೆ ಆಕೆಯ ಹೆಣ್ಣು ಶರೀರಕ್ಕೆ ಅನುಮೋದನೆಯೂ, ಅವಳ ಸ್ತ್ರೈಣ ಆತ್ಮಕ್ಕೆ ಗುರುತೂ ಒಟ್ಟಿಗೆ ಸಂಭವಿಸುತ್ತಿರುತ್ತದೆ. ತನ್ನ ಹೆಣ್ತನದ ಸಮಗ್ರ ಗುರುತಿಸುವಿಕೆಯನ್ನು ಒಗ್ಗೂಡಿಸಬಲ್ಲ ಕಾರ್ಯವನ್ನು ಈ ಆದರ್ಶೀಕೃತ ಲೈಂಗಿಕ 'ಏಕಾಧಿಕಾರ'ದ ಹಂಬಲವು ನಿರ್ವಹಿಸುತ್ತಿರುತ್ತದೆ.

(ಸುಧೀರ್ ಕಾಕರ್ ಅವರ Intimate Relationships ಗ್ರಂಥದಿಂದ)

ಡಾ॥ ಆನಂದ ಬಾಯಿ ಜೋಶಿ

ಹೆಣ್ಣುಮಕ್ಕಳಿಗೆ ಶಿಕ್ಷಣ-ಶಾಲೆ ಎಂದರೆ ಮೂಗು ಮುರಿಯುತ್ತಿದ್ದ, ಶಿಕ್ಷಣಕ್ಕೆ ಅವಕಾಶವೇ ಇಲ್ಲದ 19ನೇ ಶತಮಾನದಲ್ಲಿ, ಅತ್ಯಂತ ಸಂಪ್ರದಾಯಸ್ಥ ಮಹಾರಾಷ್ಟ್ರ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ, ಬಾಲ್ಯದಲ್ಲಿ 'ಓಂ' ನಾಮವನ್ನೂ ತಿದ್ದದ ಬಾಲೆಯೊಬ್ಬಳು, ಮುಂದೆ ಅಕ್ಷರ ಕಲಿತು, ಓದಿ ಬರೆದು, ವಿದೇಶದಲ್ಲಿ ಎಂ.ಡಿ. ಪದವಿ ಪಡೆದಳೆಂದರೆ, ನಿಜಕ್ಕೂ ಅಚ್ಚರಿ-ಪಡಬೇಕಾದ್ದೇ. ಆಕೆಯೇ ಆನಂದ ಬಾಯಿ ಜೋಶಿ. ಇಂದಿಗೂ ಆಕೆಯ ಸ್ಮಾರಕ ಶಿಲೆಯನ್ನು Duchess county ಯ ಒಂದು ಗ್ರಾಮದ ಸ್ಮಶಾನದಲ್ಲಿ ಕಾಣಬಹುದು.

ಈಕೆ ಹುಟ್ಟಿದ್ದು ಪುಣೆಯಲ್ಲಿ, 31ರ ಮಾರ್ಚ್ 1865ರಲ್ಲಿ. 9ನೇ ವಯಸ್ಸಿನಲ್ಲೇ ತನಗಿಂತ 20 ವರ್ಷ ಹಿರಿಯನಾದ, ಮುಂಬಯಿಯ ಠಾಣೆಯಲ್ಲಿ, ಅಂಚೆ ಕಛೇರಿಯೊಂದರಲ್ಲಿ ನೌಕರನಾದ ಗೋಪಾಲರಾವ್ ಜೋಶಿ, ಎಂಬ ವಿಧುರನೊಡನೆ, ಆ ಬಾಲೆಯ ವಿವಾಹವಾಯಿತು. ಆದರೆ ಗೋಪಾಲರಾವ್ ಜೋಶಿ, ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಸಕ್ರಿಯವಾಗಿ ಭಾಗವಹಿಸುತ್ತಿದ್ದವರಲ್ಲಿ ಒಬ್ಬಾತನಾಗಿದ್ದುದರಿಂದ ಮನೆಯಲ್ಲೇ ಆನಂದ ಬಾಯಿಗೆ, ಬೇರೆ ಬೇರೆ ವಿಷಯದಲ್ಲಿ ಕೇವಲ 2 ವರ್ಷದಲ್ಲೇ ತಾನೇ ಖುದ್ದಾಗಿ ಪ್ರಾಥಮಿಕ ಶಿಕ್ಷಣವನ್ನು ನೀಡಿದನಾತ. ಆಗಿದ್ದ ಭಾಷಾ ಅಂತಿಮ ಪರೀಕ್ಷೆಯಲ್ಲೂ ಆಕೆ ತೇರ್ಗಡೆ ಹೊಂದಿದಳು.

ಗೋಪಾಲರಾವ್ ಖುದ್ದಾಗಿ, ಕೊಲ್ಲಾಪುರದಲ್ಲಿದ್ದ ಅಮೆರಿಕಾ ಮಿಷನರಿ ಮೂಲಕ, ಅಮೆರಿಕಾದಲ್ಲಿ ಆಕೆಗಾಗಿ ವೈದ್ಯಕೀಯ ಶಿಕ್ಷಣದಲ್ಲಿ ಪ್ರವೇಶ ಮತ್ತು ಅದಕ್ಕಾಗಿ ತನಗಾಗಿ ಅಲ್ಲೊಂದು ಉದ್ಯೋಗ ಸಾಧ್ಯವೇ? ಎಂದು ಪತ್ರ ವ್ಯವಹಾರ ನಡೆಸಿದನಾತ. ಈ ವ್ಯವಹಾರ ನ್ಯೂಯಾರ್ಕಿನ Review ನಲ್ಲಿ ಪ್ರಕಟವಾಯಿತು. ಅದನ್ನು ಓದಿದ ಅಲ್ಲಿಯ ಮಹಿಳೆಯೊಬ್ಬಳು (Ms. Theodosia carpenter) ಸಹಾಯ ಮಾಡಲು ಮುಂದಾದಳು. 18 ವರ್ಷದ ಬಾಲಕಿ ಆನಂದ ಬಾಯಿ ಅಮೆರಿಕಾದಲ್ಲಿ Pennsylvania ವೈದ್ಯಕೀಯ ಕಾಲೇಜನ್ನು 1883ರಲ್ಲಿ ಸೇರಿದಳು.

ಆ ಪ್ರಯಾಣದಲ್ಲಿ ಮತ್ತಿಬ್ಬರು ಸಾಮಾಜಿಕ ಸುಧಾರಣಾ ಚಳುವಳಿಯಲ್ಲಿ ಮುಖ್ಯಸ್ಥರಾಗಿದ್ದ, ಡಾ॥ ರಮಾಬಾಯಿ ಮತ್ತು ಪಂಡಿತ ರಮಾಬಾಯಿ, ಆನಂದಬಾಯಿಗೆ ಜೊತೆಯಾದರು. ಹಾಗಾಗಿ ಈಕೆಯೂ ಹೆಸರುವಾಸಿಯಾದ ಸಮಾಜ ಸುಧಾರಕಿಯಾದಳು. 1886ರಲ್ಲಿ ಆಕೆ ಎಂ.ಡಿ. ಪದವೀಧರಳಾದಳು. ಆದರೆ ಅಲ್ಲಿಯ ತಂಪು ಹವಾ ಅವಳ ಆರೋಗ್ಯವನ್ನು ಹದಗೆಡಿಸಿತು. ಪುಣೆಗೆ ಆಕೆ ಹಿಂತಿರುಗಿ ಅದೇ ವರ್ಷ ಕೇವಲ ತನ್ನ 21ನೇ ವಯಸ್ಸಿನಲ್ಲಿ ಕ್ಷಯದಿಂದ ಗತಿಸಿದಳು. ಆಕೆ ಹೇಳುತ್ತಿದ್ದಳು "ನನ್ನ ಆಚರಣೆ ಪದ್ಧತಿಯಲ್ಲಿ, ಆಹಾರ ಉಡಿಗೆಯಲ್ಲಿ ಸ್ವಲ್ಪವೂ ಬದಲಾಗಲು ಬಯಸುವುದಿಲ್ಲ, ಹಿಂದೂವಾಗಿ ಅಮೆರಿಕಾಗೆ ಹೋಗುವೆ. ಹಿಂದೂವಾಗಿಯೇ ಜೀವಿಸಲು ಮರಳುವೆ". ಅಮೆರಿಕಾದ ಹವೆಯನ್ನು ಆಕೆ ಸಹಿಸದಿದ್ದರೂ, ದ್ವೇಷಿಸಿದರೂ, ತನ್ನ ಅಮೆರಿಕಾ ಬಂಧುಗಳಿಗೆ, ಸಂಸಾರಕ್ಕೆ, ಆ ಜನಗಳ ಬಗ್ಗೆ ಅವಳಿಗೆಷ್ಟು ವಿಶ್ವಾಸ-ಪ್ರೀತಿ ಇತ್ತು ಎಂಬುದಕ್ಕೆ ಅವಳಿಗಾಗಿ ಅಲ್ಲಿ ನಿಂತಿರುವ ಸ್ಮಾರಕಶಿಲೆ ದ್ಯೋತಕವಾಗಿದೆ, ಸಾಕ್ಷಿಯಾಗಿದೆ. ಈ ಸ್ಮಾರಕ ಶಿಲೆಯ ಹಿಂದೆಯೂ ಆಕೆಯ ಪತಿ ಗೋಪಾಲರಾವ್ ಜೋಶಿಯ ಸಹೃದಯತೆ, ಸಹಾಯಹಸ್ತ ಅಡಗಿದೆ. ಸಂಪ್ರದಾಯಕ್ಕೆ ವಿರೋಧವಾಗಿ ಆನಂದ ಬಾಯಿಯ ಚಿತಾಭಸ್ಮವನ್ನು ಅಮೆರಿಕಾಗೆ ಕಳುಹಿಸಿದನಾತ.

ಇತ್ತೀಚೆಗೆ ಪುಣೆಯಲ್ಲಿರುವ "ತಿಲಕ ಸ್ಮಾರಕ ಮಹಾಮಂಡಳಿ"ಯ ಸಂಶೋಧಕ ಅಧಿಕಾರಿ, ಡಾ॥ ವಿ.ಡಿ. ದಿವಾಕರ್‌ರವರು, ಅಮೆರಿಕಾದಲ್ಲಿದ್ದ ತಮ್ಮ ಅಣ್ಣನ ಮಗಳು ಸುಪ್ರಿಯಾ ಮೂಲಕ, ಆನಂದಬಾಯಿಯು ವಾಸಿಸಿದ್ದ ಮನೆ, ಮತ್ತು ಆಕೆಯ ಸಮಾಧಿಯನ್ನು ಪತ್ತೆ ಹಚ್ಚಿ, ಆ ಸ್ಮಾರಕದ ಫೋಟೋವನ್ನು ಪಡೆಯುವುದರಲ್ಲಿ ಯಶಸ್ವಿಯಾದರು. ಸುಪ್ರಿಯಾ, ಫೋಟೋಗಳನ್ನು ಕಳುಹಿಸಿದ್ದಲ್ಲದೆ, ಆನಂದ ಬಾಯಿಗೆ ಹಿಂದೆ ನೆರವು ನೀಡಿದ್ದ ಮಹಿಳೆ Theodosia Carpenter ನ ಮೊಮ್ಮಗಳು Nancy Cobbstone ಳನ್ನು ಕೂಡ ಭೇಟಿಯಾದಳು ಮತ್ತು ಆಕೆಯಿಂದ ಸಂಗ್ರಹವಾಗಿದ್ದ ಪಾತ್ರೆ, ಪಡಗಗಳಲ್ಲಿ ಆನಂದಬಾಯಿಯದ್ದೂ ಇದ್ದಿರಬಹುದೆಂದು ಕಂಡುಕೊಂಡಳು.

ಹೀಗೆ ಎಂ.ಡಿ. ಪದವಿ ಪಡೆದ ಮೊದಲ ಭಾರತ ಮಹಿಳೆಯಾದ ಆನಂದ ಬಾಯಿ ಜೋಷಿಯವರ ವಿಚಾರ, ಇತ್ತೀಚೆಗೆ ಪತ್ರಿಕೆ ಮೂಲಕ ಭಾರತೀಯರಿಗೆ ತಿಳಿಸಲ್ಪಟ್ಟಿತು.

-ಬಿ.ವಿ. ಸುಭದ್ರಾ

ಸಾಲುಮರದ ತಿಮ್ಮಕ್ಕ ಮತ್ತು ಪುಟಾಣಿಗಳು

ಕಳೆದ ಏಪ್ರಿಲ್ ತಿಂಗಳಿನಲ್ಲಿ ಮೈಸೂರಿನ ರಂಗಾಯಣ ನಡೆಸಿದ **'ಚಿಣ್ಣರ ಮೇಳ'**ದಲ್ಲಿ ಶಿಬಿರಾರ್ಥಿಯಾಗಿ ಭಾಗವಹಿಸಿದ್ದ ಪುಟಾಣಿ ಕಲಾವಿದೆ, ಶಾಲಾ ವಿದ್ಯಾರ್ಥಿನಿ ಬಿ. ಮೈತ್ರಿ ಆ ರಂಗ ಶಿಬಿರದಲ್ಲಿ ವಿಶೇಷವಾಗಿ ಸಾಲುಮರದ ತಿಮ್ಮಕ್ಕನೊಂದಿಗಿನ ತನ್ನ ಅನುಭವಗಳನ್ನು ಅಚಲದ ಓದುಗರೊಂದಿಗೆ ಇಲ್ಲಿ ಹಂಚಿಕೊಂಡಿದ್ದಾಳೆ. – ಸಂ.

ಬೇಸಿಗೆ ರಜೆಯಲ್ಲಿ ಮೈಸೂರಿನಲ್ಲಿರುವ ನಾಟಕ ಕರ್ನಾಟಕ ರಂಗಾಯಣ ನಡೆಸಿದ **'ಚಿಣ್ಣರ ಮೇಳ'**ದಲ್ಲಿ ನಾನೂ ಭಾಗವಹಿಸಿದ್ದೆ. ಅಲ್ಲಿ ನಮಗೆ ಚಿತ್ರಕಲೆ, ಸಂಗೀತ, ಕುಣಿತ, ಹೊಲಿಗೆ, ಜೇಡಿಮಣ್ಣಿನಲ್ಲಿ ವಸ್ತುಗಳನ್ನು ಮಾಡಲು ಹೇಳಿಕೊಟ್ಟರು. ನಾಟಕಗಳನ್ನು ಮಾಡಿಸಿದರು. ರಂಗಾಯಣದ ಸಮೀಪದಲ್ಲಿರುವ ಕುಕ್ಕರ ಹಳ್ಳಿ ಕೆರೆಗೆ ದೋಣಿ ವಿಹಾರಕ್ಕೆಂದು ಕರೆದುಕೊಂಡು ಹೋದರು. ಈ ಶಿಬಿರದಲ್ಲಿ ಎರಡು ಕಾರ್ಯಕ್ರಮಗಳು ನನಗೆ ತುಂಬಾ ಇಷ್ಟವಾದುವು. ಅವು,

1) ಒಂದು ಸಾಲುಮರದ ತಿಮ್ಮಕ್ಕ ಗಿಡ ನೆಡುವ ಕಾರ್ಯಕ್ರಮವನ್ನು ಉದ್ಘಾಟಿಸುವುದು,

2) ಇನ್ನೊಂದು ಶಿವರಾಮ ಕಾರಂತರೊಂದಿಗೆ ಚಿಣ್ಣರ ಸಂವಾದ. ಇಲ್ಲಿ ನಾನು ಸಾಲು ಮರದ ತಿಮ್ಮಕ್ಕನೊಡನೆ ನಾವು ಚಿಣ್ಣರು ನಡೆಸಿದ ಸಂವಾದವನ್ನು ತಿಳಿಸುತ್ತೇನೆ. ಸಾಲು ಮರದ ತಿಮ್ಮಕ್ಕ ಎಂದು ಹೆಸರು ಕೇಳಿದೊಡನೆ ನಾನು ಯಾರೋ ಮಿನಿಸ್ಟರ ಹೆಂಡತಿಯೆಂದುಕೊಂಡೆ. ಆದರೆ ಕಾರ್ಯಕ್ರಮವನ್ನು ಉದ್ಘಾಟಿಸಲು ಬಂದವರು ಮಿನಿಸ್ಟರ ಹೆಂಡತಿಯಲ್ಲ, ಅವರು ಒಬ್ಬ ಅಜ್ಜಿ. ಅವರೇ ಸಾಲು ಮರದ ತಿಮ್ಮಕ್ಕನವರು. ಸರಳವಾದ ಸೀರೆಯುಟ್ಟ ಸಾಲು ಮರದ ತಿಮ್ಮಕ್ಕನವರು ಸಭೆಗೆ ಬಂದರು. ಆಗ ರಂಗಾಯಣದ ನಿರ್ದೇಶಕರಾದ ಬಸವಲಿಂಗಯ್ಯನವರು ಇವರೇ ಕುದೂರಿನಲ್ಲಿ 260 ಆಲದ ಮರಗಳನ್ನು ನೆಟ್ಟಿದ್ದಕ್ಕಾಗಿ ನಾಗರೀಕ ರಾಷ್ಟ್ರೀಯ ಪ್ರಶಸ್ತಿಯನ್ನು ಗೆದ್ದ ಅಜ್ಜಿಯೆಂದು ಪರಿಚಯಿಸಿದರು. ಸಾಲು ಮರದ ತಿಮ್ಮಕ್ಕನವರಿಗೆ ಮಕ್ಕಳು ಹಲವಾರು ಪ್ರಶ್ನೆಗಳನ್ನು ಕೇಳಿದರು. 'ನೀವು ಸಾಲು ಮರಗಳನ್ನು ನೆಟ್ಟಿದ್ದು ಯಾತಕ್ಕೆ?' 'ಮರಗಳನ್ನು ನೆಟ್ಟಿದ್ದು ನೀವೊಬ್ಬರೇನೋ ಅಥವಾ ಯಾರಾದರೂ ನೆರವು ನೀಡಿದರೋ?' 'ನಿಮಗೆ ಪ್ರಶಸ್ತಿ ಬಂದಾಗ ನಿಮಗೆ ಏನನ್ನಿಸಿತು?' ಇತ್ಯಾದಿ. ಈ ಪ್ರಶ್ನೆಗಳಿಗೆ ಅವರು ಕೊಟ್ಟ ಉತ್ತರ "ನನಗೆ ಮದುವೆಯಾದ ಮೇಲೆ ಮಕ್ಕಳಾಗಲಿಲ್ಲ. ಅದಕ್ಕಾಗಿ ಆ ಮರಗಳನ್ನು ನನ್ನ ಮಕ್ಕಳಂತೆ ಸಾಕಿ ಬೆಳೆಸಿದ್ದೇನೆ. ನನಗೆ ನೆಡಲು ನನ್ನ ಗಂಡ ಸಹಾಯ ಮಾಡಿದರು. ಈಗ ನನ್ನ ಗಂಡ ಬದುಕಿಲ್ಲ. ನನ್ನ ಗಂಡನನ್ನು ಅವರ ಬಂಧುಗಳು ನಾಲ್ಕು ಎಕರೆ ಜಮೀನಿಗಾಗಿ ಕೊಂದರು. ಯಾರೋ ಒಂದಿಬ್ಬರು ಆಫೀಸರುಗಳು ಒಂದು ನಿಮಗೆ ಪ್ರಶಸ್ತಿ ಬಂದಿದೆಯೆಂದು ಹೇಳಿದರು. ಕೆಲವು ದಿನಗಳಾದ ಮೇಲೆ ಇನ್ನೊಬ್ಬರು ಬಂದು ಡೆಲ್ಲಿಗೆ ಕರೆದುಕೊಂಡು ಹೋಗಿ ಕಾರಿನಲ್ಲಿ ಓಡಾಡಿಸಿ ಅಲ್ಲಿ ಸರ್ಟಿಫಿಕೇಟು, ಪದಕ, ಮತ್ತು ಐನೂರು ರೂ. ಕೊಟ್ಟು ನನ್ನ ಹೆಬ್ಬೆಟ್ಟನ್ನು ಒತ್ತಿಸಿಕೊಂಡರು. ಮಿಕ್ಕಿದ ದುಡ್ಡು ಯಾರಿಗೆ ಕೊಟ್ಟರೂ ಏನೊ ನನಗೆ ಗೊತ್ತಿಲ್ಲ. ನಾನು ಅನಕ್ಷರಸ್ಥೆ. ಈಗ ನಾನು ಬದುಕಿರುವವರೆಗೂ ಸುಖವಾಗಿರೋಣವೆಂದುಕೊಂಡು ಇದ್ದೇನೆ. ನನಗೆ ತುಂಬಾ ಕಷ್ಟ ಕೊಟ್ಟ ಬಂಧುಗಳು ಈ ಪದಕ ಬಂದ ಮೇಲೆ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ."

ಹೀಗೆ ಭಾಷಣ ಮಾಡಿದ ನಂತರ ತಿಮ್ಮಕ್ಕನವರು ಮಕ್ಕಳೊಂದಿಗೆ ಗಿಡಗಳನ್ನು ನೆಟ್ಟರು. ಕಾರ್ಯಕ್ರಮ ಮುಗಿದ ನಂತರ ಮಕ್ಕಳೆಲ್ಲಾ ಅವರ ತಂದೆ, ತಾಯಿಗಳೊಂದಿಗೆ ತಿಮ್ಮಕ್ಕನವರನ್ನು ಮುತ್ತಿಗೆ ಹಾಕಿ ಹಲವಾರು ಪ್ರಶ್ನೆಗಳನ್ನು ಕೇಳುತ್ತಲೇ ಇದ್ದರು. ನಾನೂ ಆ ಗುಂಪಿನಲ್ಲಿ ಒಬ್ಬಳಾಗಿ ಪ್ರಶ್ನೆಗಳನ್ನು ಕೇಳಲು ಸಾಧ್ಯವಾದದ್ದು ನನಗೆ ತುಂಬಾ ಸಂತೋಷ ಕೊಟ್ಟಿತು. ಅನಕ್ಷರಸ್ಥಳಾದ ತಿಮ್ಮಕ್ಕ ತುಂಬಾ ಕಷ್ಟ ಪಟ್ಟಿದ್ದು ಕೇಳಿ ಬೇಜಾರಾಯಿತು. ಹಾಗೆಯೇ ಮಕ್ಕಳಿಲ್ಲದ ತಿಮ್ಮಕ್ಕ ಗಿಡಗಳನ್ನು ಮಕ್ಕಳಂತೆ ಬೆಳೆಸಿ ದೊಡ್ಡದು ಮಾಡಿ ನೂರಾರು, ಸಾವಿರಾರು ಜನಗಳಿಗೆ ನೆರಳು ಕೊಟ್ಟದ್ದು, ನಾವೆಲ್ಲಾ ನೋಡಿ ಕಲಿಯಬೇಕಾದ ವಿಷಯ.

– ಬಿ. ಮೈತ್ರಿ

ಕಥೆಯಾದ ಬಾಲೆಯರು

1

ನಾನು ಹುಟ್ಟಿದ್ದು ಭಾರತದಲ್ಲಿ, ಆದರೆ ಬಾಲ್ಯವೆಲ್ಲಾ ಕಳೆದದ್ದು ಬರ್ಮಾದಲ್ಲಿ. 2ನೇ ಮಹಾಯುದ್ಧದ ಸಮಯ, ಹೆಂಗಸರು, ಮಕ್ಕಳನ್ನು ಬರ್ಮಾದಿಂದ ಕಳಿಸಿ ಬಿಡುವಂತೆ, ಆಜ್ಞೆ ಹೊರಡಿಸಲಾಗಿತ್ತು. ಪ್ರತಿ ಮನೆಯ ಗಂಡಸರನ್ನು ಎಲ್ಲೆಲ್ಲಿಗೋ ಕರೆದೊಯ್ಯಲಾಗಿತ್ತು. ಅವರಲ್ಲಿ ಅಲ್ಲಿಯೇ ಕೆಲಸದಲ್ಲಿದ್ದ ನನ್ನ ತಂದೆಯೂ ಒಬ್ಬರಾಗಿದ್ದರು. ಹೀಗಾಗಿ 2ನೇ ಮಹಾಯುದ್ಧದ ಸಮಯದಲ್ಲಿ ಬರ್ಮಾದಿಂದ ಭಾರತಕ್ಕೆ, ಕಾಲ ನಡಿಗೆಯಲ್ಲಿ ಕೇವಲ ಪ್ರಾಣಹೊತ್ತು ಬಂದ ಭಾರತೀಯರಲ್ಲಿ ನಾವೂ ಇದ್ದೆವು- ನಾನು, ತಾಯಿ ಮತ್ತು ತಂಗಿ. ಕೆಲಕಾಲದ ನಂತರ ತಂದೆ ನಮ್ಮನ್ನು ಸೇರಿದರು.

> **''ಕಥೆಯಾದ ಬಾಲೆಯರು'' ಅಚಲ ಆರಂಭಿಸಿರುವ ಒಂದು ಹೊಸಲೇಖನ ಮಾಲೆ. ಸಾಮಾನ್ಯಾತಿಸಾಮಾನ್ಯ ಹೆಣ್ಣುಮಕ್ಕಳ ಜೀವನದ ಅನುಭವದಿಂದ ಹೆಕ್ಕಿ ಹೊಂದಿಸಿದ ಈ ಮಾಲೆಗೆ. ಶ್ರೀಮತಿ ಬಿ.ವಿ. ಸುಭದ್ರಾ, ಮೊದಲ ಲೇಖನವನ್ನು ಒದಗಿಸಿದ್ದಾರೆ. ಅನುಭವವನ್ನು ಆಧರಿಸಿದ ಇಂತಹ ಲೇಖನಗಳನ್ನು ಅಚಲದ ಓದುಗರೂ ಬರೆದು ಕಳುಹಿಸಬಹುದು.**
>
> -ಸಂ.

ನನ್ನ ತಾತ, ತಾಯಿಯ ತಂದೆ ನೌಕೆಯಲ್ಲಿ ದೊಡ್ಡ ಹುದ್ದೆಯಲ್ಲಿದ್ದವರು. ಅತಿ ಶ್ರೀಮಂತ ಮನೆತನ ಅವರದ್ದು. ನನ್ನ ತಾಯಿ ಅಂದರೆ, ಅವರ ಮಗಳು ಎಲ್ಲಿ ನಲುಗಿ ಹೋದಾಳೋ ಎಂದು, ಅಡಿಗೆ ಆಳಿನ ಸಮೇತ ಒಡವೆ ವಸ್ತ್ರ ದಿನಚರಿಗೆ ಬೇಕಾದ ಸಾಮಾನುಗಳನ್ನು ತುಂಬಿದ ಪೆಟಾರಿಗಳನ್ನೇ ಮಗಳಿಗೆ ಕಳಿಸಿಕೊಡುತ್ತಿದ್ದರು. ಇಂತ ಶ್ರೀಮಂತಿಕೆ ನಮ್ಮದಾಗಿದ್ದರೂ ತಾಯಿ-ತಂದೆ ಓದಿದವರಾಗಿದ್ದರೂ, ಬರ್ಮಾದಲ್ಲಿ ಇದ್ದ ಕಾರಣ ಮತ್ತು ಯುದ್ಧದ ಸಮಯವಾದ್ದರಿಂದ ನನಗೆ ಶಾಲೆಗೆ ಹೋಗಲಾಗಲೇ ಇಲ್ಲ. ಏನನ್ನೂ ಕಲಿಯಲಿಲ್ಲ. ತಾತ ನಾವು ಬದುಕಿಲ್ಲವೆಂದು, ದುಃಖಿತರಾಗಿ ತಿಥಿ ಕೂಡ ಮಾಡಿದ್ದರು. ಜರ್ಝರಿತರಾದ ನಮ್ಮನ್ನು ಆಸ್ಪತ್ರೆಗೆ ಸೇರಿಸಿ, ಪುನಃ ನಮ್ಮನ್ನು ಸ್ಥಿತಿವಂತಿಕೆಗೆ ಏರಿಸಿದರು. ಒಂದಷ್ಟು ಶ್ರೀಮಂತಿಕೆಯನ್ನು ಬರ್ಮಾದಿಂದ ಭಾರತಕ್ಕೆ ಹೆದರಿ ಓಡಿ ಬಂದಾಗ, ಕಳೆದುಕೊಂಡಾಗಿತ್ತು. ತರಲಾಗದೆ, ಹೊರಲಾಗದೆ, ಒಂದಷ್ಟು ಚಿನ್ನ-ಬೆಳ್ಳಿಯನ್ನು ನೆಲದಲ್ಲಿ ಹೂಳಿಬಂದೆವು.

ಭಾರತಕ್ಕೆ ಬಂದು, ನೆಲಸಿದ್ದ ಕೆಲವರ್ಷಗಳಲ್ಲೇ ನನಗೆ ಮದುವೆ ಗೊತ್ತು ಮಾಡಿದರು. ನನಗಾಗ 15-16 ವರ್ಷವಿರಬಹುದಷ್ಟೆ. ನಾನಾಗ ಎಲ್ಲರ ಬಾಯಲ್ಲೂ, ಎಷ್ಟೊಂದು ಚೆಂದದ ಹುಡುಗಿ ಎನಿಸಿಕೊಂಡ, ರೂಪವತಿಯಾಗಿದ್ದೆ. ಮೈತುಂಬಾ ಒಡವೆ ಇಟ್ಟು, ವರದಕ್ಷಿಣೆ ಕೊಟ್ಟು, ನನ್ನ ಮದುವೆಯನ್ನು ಬಹಳ ವಿಜೃಂಭಣೆಯಿಂದ ನಡೆಸಿದರು. ಆಗ ಹೈಸ್ಕೂಲಿನಲ್ಲಿ ಓದುತ್ತಿದ್ದ, ನನ್ನ ಜಾಣೆ ತಂಗಿ ಉಪದೇಶಿಸಿದ್ದಳು- ''ಅವನನ್ನು ಮದುವೆಯಾಗಬೇಡ, ವರದಕ್ಷಿಣೆ ಒಡವೆ ಆಸೆ ಅವನಿಗೆ, ನಿನಗೋ ವಿದ್ಯೆಯು ಬಾರದು, ಕೆಲಸವೂ ಬಾರದು, ನೀನು ಸುಖವಾಗಿರುವುದಿಲ್ಲ'' ಎಂದು. ಆಲೋಚನಾ ಶಕ್ತಿಯೇ ಇಲ್ಲದ ನನಗೆ ಇನ್ನು ಬಾಯಿ ತೆರೆಯುವ ಶಕ್ತಿ ಎಲ್ಲಿಂದ ಬರಬೇಕು? ಎರಡು ವರ್ಷ ಸಂಸಾರ ಮಾಡಿದೆವು.

ಅಪ್ಪ ಅಮ್ಮನ ಮುದ್ದಿನ ಶ್ರೀಮಂತ ಕುಮಾರಿಯಾಗಿದ್ದೆನಲ್ಲವೇ? ನನಗೆ ಕಾಫಿ ಮಾಡಲೂ ಬರುತ್ತಿರಲಿಲ್ಲ. ಇದೇ ನೆಪದಿಂದ ನನ್ನ ಗಂಡ, ನನಗೆ ಮಾನಸಿಕವಾಗಿ ದೈಹಿಕವಾಗಿ ಹಿಂಸೆ ಕೊಡಲಾರಂಭಿಸಿದ. ಆತನು ಕೊಡುತ್ತಿದ್ದ ಹಿಂಸೆ ಚಿತ್ರವಿಚಿತ್ರ. ಮೊದಲ ಬಾರಿ 2ನೇ ಷೋ ಸಿನಿಮಾಗೆಂದು ಕರೆದೊಯ್ದ ಆತ. ಚಿತ್ರದ ಮಧ್ಯದಲ್ಲೇ ಈಗ ಬರುವೆನೆಂದು ಎದ್ದುಹೋದ ಆತ, ಚಿತ್ರ ಮುಗಿದು, ಮಂದಿರ ಖಾಲಿಯಾದರೂ ನಾಪತ್ತೆ. ನಾನು ಹೊರಗೆ ಬಂದು ಆತನಿಗಾಗಿ ಹುಡುಕಿದೆ. ಪ್ರಯೋಜನವಾಗಲಿಲ್ಲ. ಹೆದರಿ ಕಂಗಾಲಾದೆ. ಮೈತುಂಬಾ ಒಡವೆ ಬೇರೆ. ಅಲ್ಲಿದ್ದವರು ನನ್ನನ್ನು ವಿಚಿತ್ರವಾಗಿ ನೋಡಲಾರಂಭಿಸಿದರು. ತಲೆ ಮೇಲಿಂದ ಮೈತುಂಬಾ ಸೆರಗು ಹೊದೆದು, ಯಾರೋ ಪುಣ್ಯಾತ್ಮರ ಸಹಾಯದಿಂದ ಮನೆ ಸೇರಿದ್ದಾಯಿತು. ಇಷ್ಟಾದರೂ ನನ್ನ ಗಂಡ ಪದವೀಧರ, ಮಿಲ್ಟ್ರಿಯಲ್ಲಿ ಕೆಲಸ ಮತ್ತು ತೊಂದರೆ ಎಂದರೆ ನಿತ್ಯವೂ ಹೊರಗೆ ಬೀಗ ಹಾಕಿ ಹೋದ ಪತಿರಾಯ, ಮನೆಗೆ ವಾರದ ನಂತರ ಬರುತ್ತಿದ್ದ. ಎಷ್ಟೋ ಬಾರಿ, ತಿನ್ನಲು, ಅಡಿಗೆ ಮಾಡಲು ಏನೂ ಮನೆಯಲ್ಲಿರುತ್ತಿರಲಿಲ್ಲ. ಇವೆಲ್ಲವನ್ನೂ ಅಮ್ಮ-ಅಪ್ಪನಿಗೆ ನಾನು ಹೇಳಹೋಗಲಿಲ್ಲ. ನೆರೆಹೊರೆಯವರಿಗೂ ಗುಟ್ಟನ್ನು ಬಿಟ್ಟುಕೊಡಲಿಲ್ಲ.

ಮತ್ತೊಂದು ದಿನ, ನನ್ನ ಮೇಲೆ ಬಿಸಿ ನೀರು ಸುರಿದು, ಹೊರಗೆ ಹೋಗಿಬಿಟ್ಟ ಮಹರಾಯ ಹೊರಗಿನಿಂದ ಬೀಗ ಹಾಕುವುದನ್ನು ಮರೆಯಲಿಲ್ಲ. ಕಿಟಕಿಯಿಂದಲೇ ನೆರೆಯವರನ್ನು ಕೂಗಿದೆ. ಮೈತುಂಬಾ ಶಾಲು ಹೊದೆದಿದ್ದೆ. ಮೈ ಹುಷಾರಿಲ್ಲವೆಂದು, ಗಂಡ

ಬರುವುದು ಪಾರವಾಗುತ್ತದೆಂದು, ಅಮ್ಮನ ಮನೆಗೆ ಹೋಗಲು, ಬೀಗ ಮುರಿಸಿ, ಹೊರಗೆ ಬಂದೆ. ಈ ಎರಡು ವರ್ಷದ ಅವಧಿಯಲ್ಲಿ ಕಾಲೇಜಿನಲ್ಲಿ ಓದುತ್ತಿದ್ದ ನನ್ನ ತಂಗಿ, ನ್ಯುಮೋನಿಯಾದಿಂದ ಮರಣಿಸಿದ್ದಳು. ಮೈಯೆಲ್ಲಾ ಸುಟ್ಟುಹೋದ ನನ್ನನ್ನು ನೋಡಿ ಅಪ್ಪ ಅಮ್ಮ ಅದೆಷ್ಟು ದುಃಖ ಪಟ್ಟರೆಂದರೆ, ಹೇಳಲಾಗುವುದಿಲ್ಲ. ಅಪ್ಪ-ಅಮ್ಮ ಮಾಡಿದ ತಪ್ಪೆಂದರೆ ಹುಸಿ ಮರ್ಯಾದೆಗೆ ಹೆಚ್ಚು ಬೆಲೆ ಕೊಟ್ಟದ್ದು. ಪರಿಚಯಸ್ಥ ಡಾಕ್ಟರ ಬಳಿ ನನ್ನ ಕರೆದೊಯ್ದರು. ಅವರು ಇದು ಪೊಲೀಸ್ ಕೇಸಾಗುತ್ತದೆಂದು ಚಿಕಿತ್ಸೆ ನೀಡಲು ನಿರಾಕರಿಸಿದರು. ಅಪ್ಪ-ಅಮ್ಮ ಅವರ ಕಾಲು ಹಿಡಿದು ಅತ್ತಷ್ಟು ಹಿಂದೆ ಎಂದೂ ಅತ್ತಿರಲಿಲ್ಲವೇನೋ. ಗುಟ್ಟಾಗಿಯೇ ಚಿಕಿತ್ಸೆ ನಡೆಯಿತು. ನಾನು ಸರಿಯಾಗಲು 5,6 ತಿಂಗಳೇ ಹಿಡಿದವು. ನನ್ನ ಗರ್ಭಕೋಶಕ್ಕೆ ಹೆಚ್ಚು ಘಾಸಿಯಾಗಿತ್ತು. ಮುಂದೆ ವರ್ಷದಲ್ಲೇ ವಾಹನದ ಅಪಘಾತದಿಂದ ಹಲ್ಲುಗಳನ್ನೆಲ್ಲಾ ಕಳೆದುಕೊಂಡೆ.

ಹೀಗೆ ಚಿಕ್ಕ ವಯಸ್ಸಿನಲ್ಲೇ ಮುದುಕಿಯಾದೆ. ಒಡವೆ-ವಸ್ತುವೆಲ್ಲಾ ಗಂಡನ ಬಳಿಯೇ ಉಳಿದು ಹೋದವು. ಆತ ದೂರದ ಊರಿಗೆ ವರ್ಗವಾಗಿ ಹೋದದ್ದು ತಿಳಿಯಿತು. ಅಪ್ಪ ಅಳಿಯನ ಮೇಲೆ ಕೇಸು ಹಾಕಿದರು. ಲಾಯರುಗಳು ಅದೆಷ್ಟೋ ಆಗಿ ಹೋದರು. ದುಡ್ಡೆಲ್ಲಾ ಕಳೆಯುತ್ತಾ ಬಂತಷ್ಟೆ. ನುಚ್ಚಾಗಲೇ ಕೇಸು ಹಾಕಬೇಕಿತ್ತು. ಏನೋ ಮಾಡಹೋಗಿ ಏನೋ ಆಯಿತಷ್ಟೆ. ಕೇಸು (ಹೆಸರಿಗೆ ಮಾತ್ರ). ನಡೆಯುತ್ತಿರುವಾಗಲೇ ತಂದೆಯೂ ತೀರಿಹೋದರು. ಜೀವನಕ್ಕೆ ಆಧಾರವಾಗಿದ್ದ ಅವರ ಪೆನಷನ್ ನಿಂತು ಹೋಯಿತು. ಲಾಯರಿಗೆ ಹಣತೆತ್ತು ಅಮ್ಮನ ಅಳಿದುಳಿದು ಒಡವೆಗಳು, ಇತರ ಬೆಲೆ ಬಾಳುವ ಮರದ ಸಾಮಾನುಗಳು ಗಿರವಿ ಅಂಗಡಿಯ ದಾರಿ ಹಿಡಿದವು. ಅವರೂ ನಮ್ಮನ್ನು ಚೆನ್ನಾಗಿ ಸುಲಿದರು. ಇಷ್ಟಾದರೂ ಅಮ್ಮನಾಗಲೀ ಅಪ್ಪನಾಗಲೀ ತಿಳಿದವರನ್ನು ಕೇಳಲಿಲ್ಲ, ಸಲಹೆ ಪಡೆಯಲಿಲ್ಲ. ಅವರಿಗೆ ಮರ್ಯಾದೆಯೇ ಸರ್ವಸ್ವವಾಯಿತು. ಕೇಸು ಪೂರ್ತಿಯಾಗಲೇ ಇಲ್ಲ. ಬಾಡಿಗೆಗೆ ಮತ್ತು ತಿನ್ನಲು ಒಂದೊಂದೇ ಸಾಮಾನನ್ನು ಮಾರುತ್ತಾ ಬಂದೆವು. ನಮ್ಮ ಸ್ಥಿತಿ ಯಾರಿಗೂ ತಿಳಿಯಬಾರದೆಂದು, ರಾತ್ರಿ ಹತ್ತು ಗಂಟೆ ಮೇಲೆ ಅಮ್ಮ-ಮಗಳು ಶ್ರೀಮಂತ ಸೋಗಿನಲ್ಲಿ ಸರ್ಕೀಟ್ ಹೋಗುತ್ತಿದ್ದೆವು. ಸಾಮಾನುಗಳನ್ನು ಎಷ್ಟಕ್ಕೆಂದರೆ ಅಷ್ಟಕ್ಕೆ ಸೀದಿ, ಜೀವನ ದೂಡಿದೆವು. ಬಡಾವಣೆಯವರು ನಮ್ಮ ರಾತ್ರಿಯ ತಿರುಗಾಟಕ್ಕೆ ಸರಿಯಾದ ಹೆಸರಿಟ್ಟು, ನಮ್ಮ ತಲೆ ಮೇಲೆ ಅಪವಾದ ಹೊರಿಸಿದರು. ಕೈ ಪೂರ್ಣ ಬರಿದಾದ ಮೇಲೆ ಮನೆ ಮಾಲಿಕ, ನಮ್ಮನ್ನು ಹೊರಕ್ಕೆ ದಬ್ಬಿದ.

ದೇವಸ್ಥಾನದ ಜಗಲಿ ಮೇಲೆ, ಅಲ್ಲಿ-ಇಲ್ಲಿ ಮಲಗಿ, ಬೆಳಕು ಹರಿಯುವ ಮೊದಲೇ ಬೀದಿ ನಲ್ಲಿಯಲ್ಲಿ ಸ್ನಾನಮಾಡಿ, ಕಾಲ ಕಳೆದೆವು. ಇಷ್ಟಾದರೂ, ಅಪ್ಪನಂತೆ ಅಮ್ಮನು ಕೂಡ ನನ್ನನ್ನು ತನ್ನ ಕಣ್ಣಿನ ಮುಂದಿನ ಗೊಂಬೆಯಾಗಿ ನೋಡಿಕೊಂಡಳು. ಆಕಡೆ ಈಕಡೆ ಹೋಗಲು ಬಿಡುತ್ತಿರಲಿಲ್ಲ. ರೆಕ್ಕೆ ಇದ್ದರೂ ಹಾರಲು ಬಾರದ ಗಿಣಿಯಂತಾಯ್ತು ನನ್ನ ಬಾಳು.

ಅಮ್ಮ ಕಸೂತಿ ಕೆಲಸವನ್ನು ಬಹಳ ಚೆನ್ನಾಗಿ ಮಾಡುತ್ತಿದ್ದಳು. ನಾನೊಂದಿಷ್ಟು ಲೇಸ್ ಹಾಕುವುದನ್ನು ಮಾತ್ರ ಕಲಿತೆ. ಲೇಸ್‌ಗಳನ್ನು ಕ್ರೋಶದಿಂದ ಹೆಣೆದು ಮಾರಿ, ಬಂದ ದುಡ್ಡಿನಲ್ಲಿ, ಹೋಟೆಲ್‌ನಲ್ಲಿ ಮಾತ್ರ, ಅದೂ ಬೆಳಗ್ಗೆ ಒಂದು ಬಾರಿ ಒಂದೊಂದು ಇಡ್ಲಿ ತಿಂದು ದಿನ ದೂಡುತ್ತಿದ್ದೆವು. ಈ ನಡುವೆ ಯಾರೋ ಕರುಣೆತೋರಿ, ಇಬ್ಬರಿಗೂ ವೃದ್ಧಾಪ್ಯ ವೇತನ ಸಿಗುವಂತೆ ಮಾಡಿದರು. ಅಂಚೆಯವ ಮಧ್ಯೆ ಮಧ್ಯೆ ಅದನ್ನು ಗುಳುಂ ಎನಿಸುತ್ತಿದ್ದ. ಅಪ್ಪ ಇದ್ದಾಗಲೇ ಎಲ್ಲರೂ ನನ್ನನ್ನು ಬಯ್ಯುತ್ತಿದ್ದರು. ''ನಾಲ್ಕಾಸು ದುಡಿಯಬಾರದಾ?'' ಎಂದು. ''ಸಂಪಾದನೆಗೆ ನೀನು ಹೊರಗೆ ಹೋದರೆ ನಾವು ಪ್ರಾಣ ಕಳೆದುಕೋಳ್ತೀವಿ'' ಎಂದು ಅಪ್ಪ-ಅಮ್ಮ. ಹೀಗಾಗಿ ನಾನು ಎಲ್ಲವನ್ನೂ ನುಂಗಿದೆ. ಅಮ್ಮನಂತು ಕೊರಗಿ-ಕೊರಗಿ ಜರ್ಝರಿತರಾದರು. ಅರಳು ಮರಳಿನಿಂದ ನನಗೆ ಹಿಡಿಶಾಪ ಹಾಕುತ್ತಿದ್ದರು.

ಇಷ್ಟಾದರೂ ಒಬ್ಬರನ್ನು ಬೇಡಲಿಲ್ಲ. ಎಷ್ಟೋ ದಿವಸ ಉಪವಾಸದಲ್ಲಿ ಕಳೆದೆವು. ಅಮ್ಮನಂತು ಯಾರೊಬ್ಬರು ಕೊಟ್ಟ ಊಟವನ್ನು ಮುಟ್ಟುತ್ತಿರಲಿಲ್ಲ. ಆಯಿತು ಅವರೂ ಗತಿಸಿದರು. ಈಗ ನನ್ನ ವಾಸ ಯಾರೋ ಹಾಕಿಕೊಟ್ಟ ಹರಕು-ಮುರುಕು ಗುಡಿಸಿಲಿನಲ್ಲಿ. ನನ್ನ ಕುತ್ತಿಗೆ ಬಾಗಿದೆ. ಕೂದಲೆಲ್ಲಾ ಬೆಳ್ಳಗಾಗಿದೆ, ಚರ್ಮ ಸುಕ್ಕುಗಟ್ಟಿದೆ. ನನಗೀಗ ಯಾರ ಸಹಾಯವೂ ಪ್ರಯೋಜನವಿಲ್ಲ. ಅನಾಥೆಯಾಗಿ ಯಮನಿಗಾಗಿ ಕಾಯುತ್ತಿದ್ದೇನೆ. ಇಷ್ಟಾದರೂ ನನ್ನ ಸ್ಥಿತಿಗೆ ನಾನೊಂದು ದಿವಸವೂ ಅತ್ತಿಲ್ಲ.

ಯಾವ ಹೆಣ್ಣು ಮಕ್ಕಳು ನನ್ನ ಹಾಗೆ ಶ್ರೀಮಂತತನದ ಮರ್ಯಾದೆಗೋಸ್ಕರ ಮುಂದಾಲೋಚನೆ ಇಲ್ಲದೆ, ನಿರ್ಗತಿಕಳಾಗಿ, ಆಗಬಾರದು, ಅಮ್ಮ ಅಪ್ಪ ಹಾಕಿದ ಆಲದ ಮರಕ್ಕೆ ಜೋತು ಬೀಳಬಾರದೆಂಬುದೇ ನನ್ನ ಆಶಯ.

(ಕಥೆಯಾದ ಹೆಣ್ಣು ಅನಸೂಯ ಹೇಳಿದ್ದು.)

ಅನಿಷ್ಟಗಳಿಂದ ಅರಸೊತ್ತಿಗೆಯವರೆಗೆ :

ನಟಿ ನೆಲ್‌ಗ್ವಿನ್ (Nell Gwyn) ಕಾಲ 1650-1687

ಲಂಡನ್ನಿನ ಕೊವೆಂಟ್‌ಗಾರ್ಡನ್ ಎಂಬ ಪ್ರದೇಶದಲ್ಲಿ ಕ್ರಿಸ್ತಶಕ 1650ರ ಒಂದು ದಿನ ಪುಟ್ಟ ಜೀವಿ ಹೆಣ್ಣಾಗಿ ಈ ಪ್ರಪಂಚದಲ್ಲಿ ಕಣ್ಣುಬಿಟ್ಟಾಗ ಅದರ ಪಾಲಿಗೆ ದಕ್ಕಿದ್ದು ಸುಖವಂತೂ ಅಲ್ಲ. ಕೆಲಸ ಮಾಡದ ಸೋಮಾರಿ, ಸಾಲ ಮಾಡುವುದನ್ನೇ ವೃತ್ತಿಯಾಗಿಸಿಕೊಂಡ ತಂದೆ, ಗಂಡನ ಕಿರುಕುಳಗಳಿಂದ ಪಾರಾಗಲು 'ಮದ್ಯ'ದ ಮರೆ ಹೋಗುತ್ತಿದ್ದ ತಾಯಿ. ಹೊಟ್ಟೆಬಟ್ಟೆಗಳಿಗೇ ಪರಿತಪಿಸುವಂಥ ಪರಿಸರದಲ್ಲಿ ಆರುವರ್ಷದವರೆಗೆ ಉಸಿರು ಹಿಡಿದು ಬದುಕಿದ್ದೇ ಅಚ್ಚರಿ! ಅಂತೂ ಮಗು ನೆಲ್‌ಗ್ವಿನ್ ಬದುಕಿ ಬೆಳೆಯಿತು. ಅಷ್ಟೇ ಅಲ್ಲ ಆರೇ ವರ್ಷಗಳಿಗೆ ತನ್ನ ಕುಟುಂಬದ ಹೊಣೆಯನ್ನು ತನ್ನ ಪುಟ್ಟ ಭುಜದ ಮೇಲೆ ಹೊತ್ತು ಸಾಗಿತು. ತಾಯಿಯ ಕುಡಿತಕ್ಕೆ ಹಣ ಒದಗಿಸುವ, ತಂದೆಗೆ ಸಾಲ ಕೊಟ್ಟವರಿಂದ ಛೀಮಾರಿ ಹಾಕಿಸಿಕೊಳ್ಳುವ ದಾರುಣ ಬಾಲ್ಯ ನೆಲ್‌ಳದು.

ನೆಲ್ ತನ್ನ ಬದುಕು ಪ್ರಾರಂಭಿಸಿದ್ದು ಒಂದು ವೇಶ್ಯಾಗೃಹದಲ್ಲಿ ಬರುವ ಅತಿಥಿಗಳಿಗಾಗಿ ನೀರು ತುಂಬುವ ಕಾಯಕದಿಂದ. ಇದು ತಾಯಿಯೇ ಹುಡುಕಿ ದಯಪಾಲಿಸಿದ ವೃತ್ತಿ. ಜೀತ ಇವಳದ್ದು ಇದಕ್ಕೆ ದೊರಕುವ ಕೂಲಿ ತಾಯಿಯದ್ದು! ಪುಟ್ಟ ನೆಲ್ ತುಂಬ ಚುರುಕಾಗಿದ್ದಳು. ಬಿಡುವಿನ ವೇಳೆಯಲ್ಲಿ ಇದ್ದಲು ಸುಡುವ ಕಡೆ ಮೂಟೆಯಿಂದ ಉದುರುವ ಪುಡಿ ಇದ್ದಲನ್ನು ಒಟ್ಟುಗೂಡಿಸಿ ಹೊತ್ತು ತಂದು ಮಾರುವುದು, ಸೇಬಿನ ಹಣ್ಣುಗಳನ್ನು ಹೆರ್ರಿಂಗ್ ಮೀನುಗಳನ್ನು ಬುಟ್ಟಿಗಳಲ್ಲಿ ಹೊತ್ತು ಮಾರುವುದು. ನೆಲ್‌ಳ ಉದ್ಯೋಗದ ಬದುಕಿನಲ್ಲಿ ಅನಿವಾರ್ಯವಾದ ಕೆಲಸಗಳು. ನೆಲ್‌ಳ ತಾಯಿಗೆ ಈ ಎಲ್ಲ ಜೀತಗಳ ನಡುವೆಯೂ ನೆಲ್ ಓದಲಿ ವಿದ್ಯಾವಂತಳಾಗಲಿ ಎಂದಾಸೆ. ಒಂದು ಒರಟು ಮೇಷ್ಟ್ರುಗಳೇ ತುಂಬಿದ ಕುಖ್ಯಾತ ಶಾಲೆಗೆ ದಾಖಲು ಮಾಡಿಯೇ ಬಿಟ್ಟಳು. ಬೆನ್ನು ತಲೆಗಳ ಮೇಲೆ ಭಾರ ಹೊರುತ್ತಿದ್ದ ನೆಲ್, ಬೆನ್ನು ಅಂಗೈಗಳಲ್ಲಿ ಬಾಸುಂಡೆ ಬೀಳುವ ಹೊಡೆತಗಳನ್ನು ಹೊತ್ತು ಅಕ್ಷರ ಕಲಿತಳು.

ನೆಲ್‌ಳ ಉದರ ಪೋಷಣೆಯ ಕಾಯಕಗಳಲ್ಲಿ ರಾಯಲ್ ಥಿಯೇಟರ್‌ನಲ್ಲಿ ಕಿತ್ತಲೆ ಹಣ್ಣು ಮಾರುವುದೂ ಒಂದಾಗಿತ್ತು. ಆಕೆಗಾಗ ಕೇವಲ ಹದಿಮೂರು ವರ್ಷ, ಆರುವರ್ಷಗಳಿಂದ ಹದಿಮೂರು ವರ್ಷಗಳ ಬದುಕು ನೆಲ್‌ಳನ್ನು ಗಟ್ಟಿಗಿತ್ತಿಯಾಗಿಸಿತ್ತು. ಸಾಲ ಮಾಡಿ ಮಾಡಿ ತೀರಿಸಲು ಆಗದೆ ಸಾಲಗಾರರಿಗೆಂದೇ ಇದ್ದ ಪ್ರತ್ಯೇಕ ಜೈಲ್‌ನಲ್ಲಿ ತಂದೆ ಕೊನೆಯುಸಿರು ಎಳೆದಿದ್ದ. ಕುಡಿದು ಕುಡಿದು ಹಣ್ಣಾದ ತಾಯಿ ಹಾಸಿಗೆ ಹಿಡಿದಿದ್ದಳು. ಬದುಕುವ ಛಲಹೊತ್ತ ನೆಲ್ ತನ್ನ ಮುಂದೆ ಹಾಸಿರುವ ಅಗಾಧ ಬದುಕಿಗೆ ಅಣಿಯಾಗುತ್ತಿದ್ದಳು. ಆಕೆಯ ಪ್ರಜ್ವಲಿಸುವ ಕಾಂತಿ ತುಂಬಿದ ಮುಖ, ಸುಂದರ ರೂಪ, ಏನನ್ನಾದರೂ ಸಾಧಿಸಿಯೇ ತೀರಬೇಕೆಂಬ ಮಹತ್ವಾಕಾಂಕ್ಷೆ ತುಂಬಿದ ಕಣ್ಣುಗಳು ಆಕೆಯನ್ನು ಪ್ರತ್ಯೇಕವಾದ ಹುಡುಗಿಯರ ಸಾಲಿಗೆ ಸೇರಿಸುತ್ತಿತ್ತು. ಕಲಿಯುವುದರಲ್ಲಿ ನೆಲ್ ತುಂಬ ಚುರುಕಾಗಿದ್ದಳು. ರಾಯಲ್ ಕಂಪನಿ ಅರಸೊತ್ತಿಗೆಯ ನಾಟಕ ಗೃಹವಾಗಿತ್ತು. ಅಲ್ಲಿ ಕಿತ್ತಳೆಹಣ್ಣು ಮಾರುವುದಕ್ಕೆ ಪ್ರವೇಶ ಸಿಕ್ಕಿದ್ದೇ ದೊಡ್ಡದಾಗಿತ್ತು. ಆದರೆ ನೆಲ್‌ಳ ಆತ್ಮವಿಶ್ವಾಸ ತುಂಬಿದ ಮುಖ ಅಲ್ಲಿಯ ಹಿರಿಯ ನಟಿಯೊಬ್ಬಳನ್ನು ಆಕರ್ಷಿಸಿ, ಆಕೆ ನೆಲ್‌ಗೆ ನಟನೆಯ ತರಬೇತಿ ನೀಡಲಾರಂಭಿಸಿದಳು.

ನೆಲ್‌ಳ ಬದುಕು ಮತ್ತೊಂದು ಮಹತ್ವದ ಮೆಟ್ಟಿಲನ್ನೇರಿತು. ನೆಲ್ ತುಂಬ ಆಸ್ಥೆಯಿಂದ ಹಾಡುವುದು, ನರ್ತಿಸುವುದು, ಅಭಿನಯ ಎಲ್ಲವನ್ನೂ ಬಹಳ ಬೇಗ ಕಲಿಯಲಾರಂಭಿಸಿದಳು. ಆಕೆಯ ಪರಿಶ್ರಮ ಸತತಾಭ್ಯಾಸ, ಕಲಿಯುವ ಪ್ರತಿಭೆ ಕಂಪನಿಯ ಮುಖ್ಯಸ್ಥರ ಗಮನ ಸೆಳೆಯುವಂತೆ ಮಾಡಿತು. ಪರಿಣಾಮ 1664ರಲ್ಲಿ ಹದಿನಾಲ್ಕರ ಬಾಲೆ ನೆಲ್ ನವೆಂಬರ್ ತಿಂಗಳಲ್ಲಿ ರಂಗ ಪ್ರವೇಶ ಮಾಡಿ ಅಭಿನೇತ್ರಿಯಾಗಿಬಿಟ್ಟಳು. ಆಕೆ ನಟನೆಯ ಏಣಿಯನ್ನು ಏರಿದ್ದು ಬಹಳ ಬೇಗ. ಅವಳಲ್ಲಿ ಇಷ್ಟೆಲ್ಲ ದುಃಖ ನುಂಗಿ ಬದುಕಿದ್ದರೂ ಹಾಸ್ಯ ಪ್ರಜ್ಞೆ ಅಪಾರವಾಗಿತ್ತು. ಅವಳ ಸೌಂದರ್ಯ, ಇಂಪಾದ ಕಂಠ, ಚುರುಕು ನೃತ್ಯ ಹಾಗೂ ಹಾಸ್ಯ ಭರಿತ ನಟನೆ, ಕೆಲವೇ ದಿನಗಳಲ್ಲಿ ಅತ್ಯಂತ ಜನಪ್ರಿಯ ನಟಿಯಾಗಿ ಬೆಳೆಸಿ ಬಿಟ್ಟಿತು. ಅಂದಿನ ಪ್ರಸಿದ್ಧ ನಟ ಚಾರ್ಲ್ಸ್‌ಹರ್ಟ್‌ನೊಂದಿಗೆ ಆಕೆಯ ನಟನೆ ರಂಗಪ್ರಿಯರನ್ನು ಮೋಡಿಮಾಡುತ್ತಿತ್ತು. ಅಂದಿನ ನಾಟಕಕಾರ ಈ ಜೋಡಿಗಾಗಿಯೇ ನಾಟಕಗಳನ್ನು ಬರೆದು, ಇವರಿಬ್ಬರು ನಟಿಸಿದರೆ ಮಾತ್ರ ತಾವು ನಾಟಕ ಬರೆದದ್ದಕ್ಕೆ ಸಾರ್ಥಕ ಎಂದು ಭಾವಿಸುವ ಮಟ್ಟಿಗೆ ಈ ಜೋಡಿ ಬೆಳೆದಿದ್ದರು.

ಡ್ರೈಡನ್‌ನ ನಾಟಕ 'ಸೀಕ್ರೆಟ್ ಲೌ' ನಲ್ಲಿ 'ನೆಲ್'ಗಾಗಿಯೇ ತಯಾರಾದ ಪಾತ್ರ 'ಫ್ಲೊರಿಮೆಲ್'ನಲ್ಲಿ ಆಕೆ ನೀಡಿದ ಅಭಿನಯ ಅಜರಾಮರವಾಗಿ ರಂಗ ಇತಿಹಾಸದಲ್ಲಿ ದಾಖಲಾಗಿ ಉಳಿದಿದೆ. ಮುಂದೆ ನೆಲ್‌ಳ ಜೀವನ ಹಲವು ತಿರುವುಗಳನ್ನು ಪಡೆಯಿತು. ಅರಸೊತ್ತಿಗೆಗೆ ಬಹಳ ಹತ್ತಿರದ ವ್ಯಕ್ತಿಯಾದ ಲಾರ್ಡ್ ಬಕ್‌ಹರ್ಸ್ಟ್ ಜೊತೆ ಸ್ನೇಹ ಬೆಳೆಯಿತು. ಈ ಸ್ನೇಹ ಸಮಾಜದ ದೃಷ್ಟಿಯಿಂದ ಅನೈತಿಕವಾಗಿತ್ತು. ಆದರೂ ಹೆದರದ ಅವರಿಬ್ಬರೂ ವಿವಾಹಿತರಂತೆ ಒಂದೆಡೆ

ಜೀವಿಸಿದರು. ಲಾರ್ಡ್‌ಬಕ್‌ನ ಮುಖಾಂತರ ಅರಮನೆಯ ದರ್ಬಾರಿನ ಬಹುಮಂದಿ ನೆಲ್‌ಗೆ ಪರಿಚಿತರಾದರು. 1667ರಲ್ಲಿ 17ರ ಸುಂದರ ತರುಣಿ ನೆಲ್, ಚಾರ್ಲ್ಸ್ II ನ ಪ್ರೇಯಸಿಯಾಗಿ ನೇರವಾಗಿ ಅರಮನೆಗೆ ಪ್ರವೇಶಮಾಡಿ ಬಿಟ್ಟಳು.

ಅರಮನೆಯ ಬದುಕು ನೆಲ್‌ಳ ಪಾಲಿಗೆ ಹೂವಿನ ಹಾಸಿಗೆ ಏನೂ ಆಗಿರಲಿಲ್ಲ. ಬಹುಪತ್ನಿಯರನ್ನೊಳಗೊಂಡ ಅರಮನೆ ಹೆಣ್ಣುಗಳ ಪಾಲಿಗೆ ಸುಖದ ಸೋಪಾನಗಳೇನೂ ಆಗಿರಲಿಲ್ಲ. ವಿಧಿವತ್ತಾಗಿ ಮದುವೆಯಾದ ಪತ್ನಿಯರ ಪಾಲಿಗೂ ಈ ಅರಮನೆ ಉಸಿರುಗಟ್ಟಿಸುವ ತಾಣವೇ ಆಗಿತ್ತು. ಅಲ್ಲಿ ವೈರ, ಕ್ರೌರ್ಯ, ಕುಟಿಲತೆಗಳು ಧಾರಾಳವಾಗಿದ್ದವು. ನೆಲ್‌ನಂಥ ಯಾವುದೋ ಕೊಳಕುಗಲ್ಲಿಯಲ್ಲಿ ಹುಟ್ಟಿಬಂದ ಕುಲಹೀನೆಯರ ಪಾಲಿಗಂತೂ, ಹೆಜ್ಜೆ ಹೆಜ್ಜೆಗೂ ಹೀನಾಯವನ್ನೇ ಎದುರಿಸಬೇಕಾಗುತ್ತಿತ್ತು. ಆದರೆ ನೆಲ್ ಗಟ್ಟಿಗಿತ್ತಿ. ಛಲಬಿಡದ ತ್ರಿವಿಕ್ರಮೆ! ತನ್ನ ಈ 'Royal Mistress' ಸ್ಥಾನವನ್ನು ಪಟ್ಟು ಹಿಡಿದು ಉಳಿಸಿಕೊಂಡಳು. ಅವಳಿಗೆ ಪ್ರಿಯಕರರಿದ್ದಾರೆ ಎನ್ನುವ ನಿಂದನೆಯಿಂದ ಬಾರಿಬಾರಿಗೆ ಅವಮಾನಿತಳಾಗುತ್ತಿದ್ದಳು. ಇಂಥ ಗ್ರಹಣ ಪೀಡಿತ ಕಾಂತಿ ಹೀನತೆಯಿಂದ ಕೆಲವು ಕಾಲ ನರಳಿದರೂ ನೆಲ್ ಧೃತಿಗೆಡಲಿಲ್ಲ. ಎಲ್ಲ ವಿಷವನ್ನು ನುಂಗಿದ್ದ ವಿಷಕಂಠೆಯಂತೆ ಬಾಳಿದಳು. ರಂಗಭೂಮಿಯ ನೆಂಟನ್ನೂ ತೊರೆಯದೆ ಪೂರ್ಣಾವಧಿಯಾಗಿ ನಟಿಯಾಗಿ ಕೆಲಸಮಾಡುತ್ತಾ ಅಲ್ಪಾವಧಿಯ ರಾಜನ ಉಪಪತ್ನಿಯಾಗಿ ಬದುಕುತ್ತಾ ಎರಡು ವರ್ಷ ನೆಲ್ ಹೆಣಗಿದಳು. 1670ರಲ್ಲಿ ಒಂದು ಗಂಡು ಮಗುವಿನ ತಾಯಿಯಾದರೂ ರಂಗದ ನೆಂಟು ತೊರೆಯಲಿಲ್ಲ. ಒಂದಿಷ್ಟು ಕಾಲದ ನಂತರ ನೆಲ್‌ಳ ಹೋರಾಟಕ್ಕೆ ಸುಖದ ಅಂತ್ಯದಕ್ಕಿತು. ಕೊನೆಗೂ ಚಾರ್ಲ್ಸ್ ಅರಸ ನೆಲ್‌ಳನ್ನು ತನ್ನ ಉಪಪತ್ನಿ ಎಂದು ಬಹಿರಂಗವಾಗಿ ಘೋಷಿಸಿದ. ಅಲ್ಲದೆ ಪ್ರತಿಷ್ಠಿತ ಬಡಾವಣೆಯಾದ 'ಪಾಲ್‌ಮಲ್'ನಲ್ಲಿ ಅವಳಿಗಾಗಿ ಅತ್ಯಂತ ಭವ್ಯವಾದ ಬಂಗಲೆಯೊಂದನ್ನು ಕಟ್ಟಿಸಿಕೊಟ್ಟ.

ಮುಂದೆ ನೆಲ್‌ಗ್ವಿನ್ ಅರಮನೆಗೆ ಚಿರಋಣಿಯಾಗಿ ಜೀವಿಸಿದ್ದಳು. ಅರಮನೆಯ ಕುಯುಕ್ತಿಯಿಂದ ಕೂಡಿದ ಸ್ಪರ್ಧೆಗಳ ನಡುವೆಯೂ ಅರಸನ ಮನೆವಾಳ್ತಿಯಲ್ಲಿ ಭದ್ರಸ್ಥಾನ ಕಾಪಾಡಿಕೊಂಡಳು. ಆಕೆ ಅರಸನಿಗೆ ನೀಡುತ್ತಿದ್ದ ಮನರಂಜನೆ ಮತ್ತು ವಿನೋದಗಳಿಂದ ಅರಮನೆಯ ವಲಯದಲ್ಲೇ ಅವಳ ವೈರಿಗಳೂ ಅವಳನ್ನು 'ಅನುಪಮ ಪ್ರತಿಭಾನ್ವಿತೆ' ಎಂದು ಒಪ್ಪಿಕೊಳ್ಳುವಂತೆ ಪರಿಸರ ಸೃಷ್ಟಿಯಾಗುತ್ತಿತ್ತು. ಚಾರ್ಲ್ಸ್ ಮತ್ತು ಜೇಮ್ಸ್ ಎನ್ನುವ ಇಬ್ಬರು ಗಂಡುಮಕ್ಕಳ ತಾಯಿಯಾದ ನೆಲ್‌ಗ್ವಿನ್, ತನ್ನ ಮಕ್ಕಳಿಗೆ ಅರಸೊತ್ತಿಗೆಯಲ್ಲಿ ಉತ್ತಮ ಪದವಿಗಳಿಗೆ ಕೊಡುವಲ್ಲಿ ಯಶಸ್ವಿಯಾದಳು. ಅಲ್ಲದೆ ಅರಸನ ಕಾಲದಲ್ಲಿಯೇ ಐದುಸಾವಿರ ಪೌಂಡ್ ವಾರ್ಷಿಕ ನಿವೃತ್ತಿ ವೇತನವನ್ನೂ, ಇತರ ಸೌಲಭ್ಯಗಳನ್ನೂ ನೆಲ್ ಪಡೆಯುತ್ತಿದ್ದಳು.

ಇಷ್ಟೆಲ್ಲ ಆದರೂ ನೆಲ್‌ಳ ಬದುಕು ಭವಿಷ್ಯದ ದೃಷ್ಟಿಯಿಂದ ಭದ್ರವಾಗಿ ಏನೂ ಇರಲಿಲ್ಲ. ಯಾವ ಕ್ಷಣದಲ್ಲಿ ಎಲ್ಲ ಸಂಪತ್ತುಗಳೂ ಕೈಯಿಂದ ಜಾರಿ ಹೊರಟೇ ಹೋಗುತ್ತದೋ ಎನ್ನುವ ಭಯದ ತಂತಿಯ ಮೇಲೆ ಈ ತಾಯಿಮಕ್ಕಳು ತಮ್ಮ ಜೀವನ ನಡೆಸುತ್ತಿದ್ದರು. ನೆಲ್‌ಳ ಸಂಕಷ್ಟವಿಧಿ ಬೆನ್ನ ಹಿಂದೇ ಕಾಡುತ್ತಿತ್ತು. ಅವಳೆದುರಿಗೇ ಅವಳ ಮೊದಲ ಮಗ ತೀರಿಕೊಂಡ. ಆತ ತನ್ನ ಮರಣ ಶಯ್ಯೆಯಲ್ಲಿ ತನ್ನ ತಮ್ಮನಿಗೆ "ನನ್ನ ಬಡತಾಯಿಯನ್ನು ಹೊಟ್ಟೆಗಿಲ್ಲದ ಹಾಗೆ ಮಾಡಿ ಸಾಯಿಸಬೇಡ" ಎಂದು ವಿನಂತಿಸಿಕೊಂಡನಂತೆ! ಈ ಮಾತೊಂದೇ ಸಾಕು ಆ ತಾಯಿ ಮಕ್ಕಳ ಅಭದ್ರ ಬದುಕನ್ನು ಬಣ್ಣಿಸುವುದಕ್ಕೆ!

ಎಲ್ಲಿಯ ಕುಡುಕ ತಾಯಿ? ಎಲ್ಲಿಯ ಸಾಲಗಾರ ತಂದೆ? ಎಲ್ಲಿಯ ಬಾಲಕಾರ್ಮಿಕ ಪರಿಶ್ರಮಗಳು? ಎಲ್ಲಿಯ ಅಭಿನೇತ್ರಿ? ಎಲ್ಲಿಯ ಅರಸನ ಉಪಪತ್ನಿ ಸ್ಥಾನ? ಈಕೆ ಹಾದು ಹೋಗಿರುವ ಘಟ್ಟಗಳು ಮಾತ್ರ ರಂಗ ಇತಿಹಾಸವನ್ನು ಓದುವವರಲ್ಲಿ ಬೆರಗನ್ನುಳಿಸಿ ಬಿಡುತ್ತದೆ. ಇಷ್ಟೆಲ್ಲ ಪರಿಧಿಗಳನ್ನು ದಾಟಿದ ನಂತರವೂ ಆಕೆ ಬದುಕಿದ್ದು ಕೇವಲ ಮೂವತ್ತೇಳು ವರ್ಷಗಳು ಮಾತ್ರ! ಈ ಅಲ್ಪಾವಧಿಯಲ್ಲೇ ನೆಲ್ ಅಭಿನೇತ್ರಿಯಾಗಿ ಸ್ಥಾಪಿಸಿದ ಸ್ಥಾನಮಾತ್ರ ಅನುಪಮವಾದದ್ದು.

-ಶಾಂತಾನಾಗರಾಜ್

"Those who ignore history condemn themselves not knowing the present; because historical development alone permits us to weigh and evaluate in their respective relation the elements present."

-Strauss

ಯುಗಾದಿಯ ಸಿಂಚನ - ನಾಡಿನ ಇಂಚರ

ಕರ್ನಾಟಕ : ಶ್ರೇಷ್ಠ ಸಂಸ್ಕೃತಿಯ ಪ್ರತೀಕ. ಭವ್ಯ ಇತಿಹಾಸವನ್ನು ಪಡೆದಿರುವ ಪುಣ್ಯ ಭೂಮಿ. ಇಲ್ಲಿಯ ಸಂಸ್ಕೃತಿ ನಿತ್ಯನೂತನ. ಇಲ್ಲಿಯ ಕಲಾಸೌರಭ ಭಾರತದಾದ್ಯಂತ ಪಸರಿಸಿದೆ. 'ಸಂಗೀತ ಸಾಹಿತ್ಯ, ಚಿತ್ರಕಲೆ, ಶಿಲ್ಪಕಲೆ, ಜಾನಪದ ಮುಂತಾದ ವಿವಿಧ ಪ್ರಕಾರಗಳಲ್ಲಿ ಕರ್ನಾಟಕ ಗಳಿಸಿರುವ ಯಶಸ್ಸು ಅನುಪಮ. ರಾಷ್ಟ್ರಕವಿ ಕುವೆಂಪುರವರು ಹಾಡಿರುವಂತೆ ಕರ್ನಾಟಕವು ''ಭೂದೇವಿಯ ಮಕುಟದ ಮಣಿ.''

ಇಂತಹ ಅಪೂರ್ವ ನಾಡಿನ ಜನರು ಉದಾರತೆ, ಸೌಮ್ಯತೆ ಶಾಂತಿಪರತೆ, ಮತಸಹಿಷ್ಣುತೆ, ಸಂಯಮ, ದೇಶಪ್ರೇಮ ಸ್ವಾಭಿಮಾನ ಇವೆಲ್ಲ ಸದ್ಗುಣಗಳ ಲಾಂಛನ. ರಾಜ್ಯವು ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಹೊಸತೊಂದು ಆಯಾಮವನ್ನು ಪಡೆದು ದೇಶಕ್ಕೇ ಮಾದರಿಯಾಗಲು ಪಣ.

ನೂತನ ಯೋಜನೆಗಳು

ಹೊಸ ಜಿಲ್ಲೆಗಳ ಉದಯ : ರಾಜ್ಯದಲ್ಲಿ ಆಡಳಿತವನ್ನು ಸುಸೂತ್ರಗೊಳಿಸಲು 9 ಹೊಸ ಜಿಲ್ಲೆಗಳ ಆರಂಭ. ಇದರಿಂದ ಸರ್ಕಾರ ಮತ್ತಷ್ಟು ಜನರ ಸಮೀಪಕ್ಕೆ ಬರಲು ಅವಕಾಶ.

50ನೇ ಸ್ವಾತಂತ್ರ್ಯೋತ್ಸವದ ಕೊಡುಗೆ : ಸ್ವಾತಂತ್ರ್ಯ ಹೋರಾಟಗಾರರು ವೃದ್ಧರು, ಅನಾಥರು, ವಿಧವೆಯರು ಮತ್ತಿತರ ಅಂಗವಿಕಲರ ಮಾಸಾಶನದಲ್ಲಿ ಹೆಚ್ಚಳ. 18,500 ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ. ಶಿಕ್ಷಣ ಮಟ್ಟದಲ್ಲಿ ಸುಧಾರಣೆ. 10,000 ಶಾಲಾ ಕೊಠಡಿಗಳ ನಿರ್ಮಾಣ, ಅಕ್ಷರಸ್ಥರ ಪ್ರಮಾಣದಲ್ಲಿ ಹೆಚ್ಚಳಕ್ಕೆ ಕಾರಣ. ಶಾಲೆಗಳೇ ಇಲ್ಲದ ಪ್ರದೇಶಗಳಲ್ಲಿ 2,000 ನೂತನ ಕಿರಿಯ ಪ್ರಾಥಮಿಕ ಶಾಲೆಗಳ ಆರಂಭ. 2000 ಕಿರಿಯ ಪ್ರಾಥಮಿಕ ಶಾಲೆಗಳ ಪ್ರಾರಂಭಕ್ಕೆ ಕ್ರಮ. ಗ್ರಾಮೀಣ ಪ್ರದೇಶಗಳಲ್ಲಿ ಜನರಿಗೆ ತಮ್ಮ ಅಗತ್ಯಗಳನ್ನು ಸುಲಭವಾಗಿ ಪಡೆದುಕೊಳ್ಳುವಂತಾಗಲು ಸುಧಾರಿತ ರಸ್ತೆ ಸಂಪರ್ಕ.

ವಾಣಿಜ್ಯ ತೆರಿಗೆ : ಸರ್‌ಚಾರ್ಜ್ ರದ್ದು. 28 ವಿವಿಧ ವಸ್ತುಗಳ ಮೇಲಿನ ತೆರಿಗೆ ಇಳಿತ. ರಸಗೊಬ್ಬರಗಳ ಮೇಲಿನ ತೆರಿಗೆ ವಿನಾಯಿತಿ. ಇವುಗಳಿಂದ ಬೆಲೆ ಏರಿಕೆಗೆ ಕಡಿವಾಣ. ಶ್ರೀಸಾಮಾನ್ಯನಿಗೆ ನಿರಾತಂಕ ಕ್ಷಣ.

ಗ್ರಾಮೀಣ ಯುವ ಜನತೆಗೆ ಸಾಂತ್ವನ : ವಿದ್ಯಾವಂತ ಗ್ರಾಮೀಣ ಯುವಕರಿಗಾಗಿ 'ಸ್ವಾವಲಂಬನೆ' ಯೋಜನೆ ಜಾರಿಗೆ - ಮೊದಲ ಹಂತವಾಗಿ 4 ಜಿಲ್ಲೆಗಳಲ್ಲಿ ಅನುಷ್ಠಾನ. ಸ್ವಯಂ ಉದ್ಯೋಗದಲ್ಲಿ ತೊಡಗುವಂತಾಗಲು 5000 ಅಭ್ಯರ್ಥಿಗಳಿಗೆ ಉತ್ಕೃಷ್ಟ ತರಬೇತಿ. ಇದಕ್ಕಾಗಿ ರೂ. 1 ಕೋಟಿ ಮೀಸಲು. ಸ್ವಸ್ತಿ ಗ್ರಾಮ ಯೋಜನೆ - ನೆಲ, ಜಲ, ನೈರ್ಮಲ್ಯ ಮತ್ತು ಗಿಡಮರಗಳ ಅಭಿವೃದ್ಧಿಗೆ ಪೂರಕ.

ಕೃಷಿ ತೋಟಗಾರಿಗೆ ಮತ್ತು ಪಶುಸಂಗೋಪನೆ : ಕೃಷಿ ಉತ್ಪಾದನೆಗಳ ಸಂಕಷ್ಟ ಮಾರಾಟದ ತಡೆಗಾಗಿ ಕ್ರಮ. ಇದಕ್ಕಾಗಿ ರೂ. 2 ಕೋಟಿ ಮೀಸಲು. ಆಹಾರ ಉತ್ಪಾದನೆ. 93.64 ಲಕ್ಷ ಟನ್ ತಲುಪುವ ಗುರಿ. ಇದು ಇದುವರೆಗಿನ ಅತ್ಯಂತ ಗರಿಷ್ಠ ಪ್ರಮಾಣ. 'ನಮ್ಮ ಮನೆ ನಮ್ಮ ತೋಟ' ಯೋಜನೆಯಡಿ ಸಣ್ಣ ರೈತರಿಗೆ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಸಹಾಯ ಧನ, ತಳ್ಳುಗಾಡಿಯಲ್ಲಿ ತರಕಾರಿ ಮಾರಾಟ ಮಾಡುವವರಿಗಾಗಿ 'ಜೀವನಮಾರ್ಗ' ಯೋಜೆಯಡಿ ಪ್ರೋತ್ಸಾಹ, ಜಾನುವಾರುಗಳಿಗೆ ಶೇ. 100 ರಷ್ಟು ಆರೋಗ್ಯ ರಕ್ಷಣೆ ಒದಗಿಸುವ ಮೂಲಕ ಸಂಖ್ಯೆ ವೃದ್ಧಿಸಲು ಯೋಜನೆ.

ನೀರಾವರಿ : ನೀರಾವರಿ ಯೋಜನೆಗಳಿಗಾಗಿ ರೂ. 1212.96 ಕೋಟಿ ಮೀಸಲು. 'ಬಚಾವತ್ ಅವಾರ್ಡ್'ನಲ್ಲಿ ಒದಗಿಸಿರುವ ರಾಜ್ಯದ ತನ್ನ ಪಾಲಿನ ನೀರನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವಂತಾಗಲು ಪೂರಕ. ಕೃಷ್ಣಾ ಭಾಗ್ಯ ಜಲನಿಗಮದ ಮೂಲಕ ರೂ. 650 ಕೋಟಿಗಳ ಸಂಗ್ರಹಣೆಯ ಉದ್ದೇಶ. ಬರಪೀಡಿತ ರಾಜ್ಯದ ಉತ್ತರದ ಜಿಲ್ಲೆಗಳು ಹಸಿರಿನಿಂದ ಕಂಗೊಳಿಸಲು ಅವಕಾಶ. ಕಾವೇರಿ ಕಣಿವೆ ಯೋಜನೆಗಳಿಗಾಗಿ ರೂ. 305 ಕೋಟಿಗಳ ಪೂರೈಕೆ. ನೀರಾವರಿ ಮತ್ತಷ್ಟು ಒತ್ತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ : ಅರುಣೋದಯ ಯೋಜನೆಯಡಿ ಮಹಿಳಾ ಕೃಷಿ ಕಾರ್ಮಿಕರಿಗೆ ಜಮೀನು ಖರೀದಿಸಲು ನೆರವು. ನವಚೇತನ ಕಾರ್ಯಕ್ರಮದಡಿ ವಿಧವೆಯರಿಗೆ ಆದಾಯವಿರುವ ಸ್ವಯಂ ಉದ್ಯೋಗ ಯೋಜನೆಗಳು. ಜಾಗೃತಿ ಕಾರ್ಯಕ್ರಮದಡಿ ಸಹಾಯಾನುದಾನ ಸಂಸ್ಥೆಗಳಲ್ಲಿ ಓದುತ್ತಿರುವ ಮಕ್ಕಳಿಗೆ ಆಹಾರ ವೆಚ್ಚಕ್ಕಾಗಿ ಅನುದಾನ ತಿಂಗಳಿಗೆ ರೂ.300ಕ್ಕೆ ಹೆಚ್ಚಳ.

ಪರಿಶಿಷ್ಟ ಜಾತಿ/ವರ್ಗಗಳ ಅಭ್ಯುದಯ : ಪರಿಶಿಷ್ಟ ಜಾತಿ : ವರ್ಗಗಳ ಜನರಿಗೆ 49,500 ಮನೆಗಳು ಕಟ್ಟುವ ಉದ್ದೇಶ. ಗಂಗಾ ಕಲ್ಯಾಣ ಯೋಜನೆಯಡಿ ಪ.ಜಾತಿ/ವರ್ಗಗಳಿಗೆ ಸೇರಿದ 20,000 ಎಕರೆ ಜಮೀನಿಗೆ ನೀರಾವರಿ ಸವಲತ್ತು. 75 ಹೊಸ ಹಾಸ್ಟೆಲ್‌ಗಳ ಪ್ರಾರಂಭ. 40 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಸ್ಥಾಪನೆ.

ವಿದ್ಯುಚ್ಛಕ್ತಿ : ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯನ್ನು ಒಂದು ನಿಗಮವಾಗಿ ಪರಿವರ್ತಿಸಲು ಪ್ರಸ್ತಾಪ. ವಿದ್ಯುಚ್ಛಕ್ತಿ ವಲಯದಲ್ಲಿ ದಕ್ಷ ಕಾರ್ಯಾಚರಣೆ.

ಮೂಲ ಸೌಲಭ್ಯಗಳ ಸುಧಾರಣೆ : ರಾಜ್ಯದಲ್ಲಿ ರಸ್ತೆ ಜಾಲ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ರಸ್ತೆ ನಿಧಿ ರಚನೆ.

'ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತ್ತಿದೆ. ಹೊಸ ಹರುಷ ತರುತ್ತಿದೆ' - ದ.ರಾ. ಬೇಂದ್ರೆ.

''ಕರ್ನಾಟಕ ಸರ್ಕಾರದ ಯುಗಾದಿಯ ಶುಭಾಶಯಗಳು''

ಕರ್ನಾಟಕ ವಾರ್ತೆ

ಮನವಿ

ಕಳೆದ ಹನ್ನೊಂದು ವರ್ಷಗಳಿಂದ ನಿರಂತರವಾಗಿ ನಡೆದುಬರುತ್ತಿರುವ ಪತ್ರಿಕೆಯಾದ 'ಅಚಲ' ಮಹಿಳಾ ಜಾಗೃತಿಯ ಧ್ಯೇಯಕ್ಕೆ ಬದ್ಧವಾಗಿರುವ ದ್ವೈಮಾಸಿಕ. ಕರ್ನಾಟಕದ ಎಲ್ಲ ಭಾಗಗಳಲ್ಲಿ ನಮ್ಮ ಚಂದಾದಾರರಿದ್ದಾರೆ; ನಾಡಿನ ಅನೇಕ ಹಿರಿಯ, ಕಿರಿಯ ಚಿಂತಕರು, ವಿಚಾರವಂತರು, ಸಾಹಿತಿಗಳು ಅಭಿಮಾನವಿಟ್ಟು ನಮ್ಮ ಪತ್ರಿಕೆಗೆ ಲೇಖನಗಳನನ್ನು ಬರೆದು ಕೊಟ್ಟಿದ್ದಾರೆ, ಕೊಡುತ್ತಿದ್ದಾರೆ. ಹೀಗಾಗಿ ಆರಂಭದಿಂದ ಇಂದಿನವರೆಗೆ ಒಂದು ಉನ್ನತ ಮಟ್ಟದ ವೈಚಾರಿಕ ಲೇಖನಗಳನ್ನು, ಸಂಶೋಧನಾ ವರದಿಗಳನ್ನು ಹಲವು ಸಾಮಾಜಿಕ ಸಮಸ್ಯೆಗಳ ಚರ್ಚೆಯನ್ನು ಮಹಿಳೆಯರ ದೃಷ್ಟಿಯಿಂದ ನಾವು ಪ್ರಕಟಿಸುತ್ತಾ ಬಂದಿದ್ದೇವೆ.

ಆದರೆ ಧ್ಯೇಯಬದ್ಧ ಮಹಿಳಾ ಪತ್ರಿಕೆಗಳೇ ಅಭಾವವಾಗಿರುವ ಈ ನಾಡಿನಲ್ಲಿ 'ಅಚಲ' ದಂಥ ಪತ್ರಿಕೆಗೆ ಎಷ್ಟು ಪ್ರೋತ್ಸಾಹ ದೊರೆಯಬೇಕೋ ಅದು ಇದುವರೆಗೂ ದೊರೆತಿಲ್ಲ. ಚಂದಾಹಣವಲ್ಲದೆ ಬೇರೆ ಯಾವ ಆದಾಯಗಳೂ ನಮ್ಮ ಪತ್ರಿಕೆಗೆ ಇಲ್ಲ. ಆದ್ದರಿಂದ ಓದುಗರಲ್ಲಿ ನಾವು ವಿನಮ್ರವಾಗಿ ಭಿನ್ನವಿಸಿಕೊಳ್ಳುವುದೇನೆಂದರೆ ದಯವಿಟ್ಟು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ನಮ್ಮ ಪತ್ರಿಕೆಗೆ ಚಂದಾದಾರರಾಗಿರಿ. ಈಗಾಗಲೇ ಚಂದಾದಾರರಾಗಿರುವವರು ದಯವಿಟ್ಟು ನವೀಕರಿಸಿರಿ. ಮಹಿಳಾ ಪ್ರಗತಿಯಲ್ಲಿ ಕಳಕಳಿ ಹೊಂದಿರುವ ದಾನಿಗಳು ಉದಾರವಾಗಿ ದಾನನೀಡುವ ಮೂಲಕ ಈ ಪತ್ರಿಕೆ ಸದಾ ಉಳಿದು ಬರುವಂಥ 'ಸ್ಥಾಯಿನಿಧಿ' ಸ್ಥಾಪನೆಗೆ ನೆರವಾಗಬೇಕೆಂದು ಕೋರುತ್ತೇವೆ.

- ಸಂಪಾದಕ ಮಂಡಳಿ

Reg. No. MAG (5) PRC, DEGL 036/89/87
BOOK POST/Periodicals

To,
Sri / Smt.

If Undelivered please return to :
Jagruthi Mahila Adhyayana Kendra
401, Vijay Tower, 2nd Main, RPC Layout
Vijayanagar, II Stage, Bangalore-560 040.

ACHALA - Edited by N. Gayathri, Published by Dr. G. Ramakrishna on behalf of Jagruthi Mahila Adhyayana Kendra, 26, 1st Main Road, Vyalikaval, Bangalore-03. Typeset & Printing by **AKSHARA PRINTERS**, B'lore-4. Ph.: 624082